ಕಾನೂನು ಸಲಹಾ ಮಂಡಲಿ (ತಿದ್ದುಪಡಿ * ವಿಧೇಯಕ 1983ನ್ನು ಸಭೆಯು ಅನುಮೋದಿಸುತ್ತದೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ : ಕರ್ಕಾಟಕ ಕಾನೂನು ಸಲಹಾ ಮಂಡಳಿ (ತಿದ್ದುಪಡಿ) ವಿಧೇಯಕ 1983ನ್ನು ಸಭೆಯು ಅನುಮೋದಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕವು ಅನುಮೋದಿಸಲಾಯಿತು.

ANNOUNCEMENT
By Panal of Chairmen

MR. DEPUTY SPEAKAR.—Under rule 9 of the Rules of Procedure and Conduct of Business in the Legislative Assembly, I nominate the following Members to the panel of Chairmen of the current session.

1. Sri N, Huchmasty Gowda.
2. Sri B. G. Banakar.
3. Sri H. Nagan Gowda.
4. Sri H. Gangadharan.
5. Sri G. P. Vadeyaraj.
6. Sri P. Ramdev.

MR. DEPUTY SPEAKER.—We will take up the next Bill.

THE KARNATAKA ECUCATIONAL INSTITUTIONS (PROHIBITION OF CAPITATION FEE) BILL, 1983
Motion to consider

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಈ ಕ್ಯಾಪಿಟೇಷನ್ ಫೀ—ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಇತರ ವಿದ್ಯಾ ಸಂಸ್ಥೆಗಳಲ್ಲಿ ಈ ಶುಲ್ಕವನ್ನು ತೆಗೆದುಕೊಳ್ಳುವ ಪದ್ಧತಿ ಹೋಗಬೇಕು ಎನ್ನುವ ಸರ್ವಮಾನ್ಯವಾದ ಅಭಿಪ್ರಾಯವನ್ನು ಸರ್ಕಾರ ಗಮನಕ್ಕೆ ತೆಗೆದು ಕೊಂಡು ಇದನ್ನು ತೆಗೆದುಹಾಕಬೇಕೆಂಬ ಪ್ರಯತ್ನ ಈ ಮಸೂದೆಯಲ್ಲಿ ಅಡಕವಾಗಿದೆ. ಇದರಲ್ಲಿ ಈ ಕ್ಯಾಪಿಟೇಷನ್ ಶುಲ್ಕವನ್ನು ಯಾವ ರೀತಿಯಿಂದ ತೆಗೆದುಹಾಕಬೇಕು, ಮತ್ತು ಈ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳತಕ್ಕಂಥ ಆಯಾಯ ಸಂಸ್ಥೆಗಳನ್ನು ನಿಗಾದಲ್ಲಿ ಇಟ್ಟುಕೊಂಡು ಬಂದಿರತಕ್ಕಂಥ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು, ಹೇಗೆ ಖರ್ಚು ಮಾಡಬೇಕು ಎಂಬುದರ ಬಗ್ಗೆ ನಿಯಂತ್ರಣಗಳು ಕೂಡ ಇವರಲ್ಲಿ ಸೂಚಿತವಾಗಿವೆ. ಈ ರೀತಿಯ ತಪ್ಪುಗಳನ್ನು ಮಾಡಿದ್ದರೆ. ಅವರ ಕೃತ್ಯಗಳಿಗೆ ಅವರು ಹೇಗೆ ಶಿಕ್ಷಾರ್ಹರಾಗುತ್ತಾರೆ ಎನ್ನತಕ್ಕಂಥ ವಿಷಯ ಕೂಡ ಈ ಮಸೂದೆಯೊಳಗೆ ಅಡಕವಾಗಿದೆ. ಆ ಬಳಿಕ ಈ ವಿಧೇಯಕ ರಿಲಿಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಟೀಸ್‌ನವರು, ನಡೆಸತಕ್ಕಂಥ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ ಎನ್ನತಕ್ಕಂಥ ಅಂಶವನ್ನು ಇದರಲ್ಲಿ ನಿವೇದಿಸಲಾಗಿದೆ. ಒಟ್ಟಿನಲ್ಲಿ ಈ ಕ್ಯಾಪಿಟೇಷನ್ ಫೀ ಪಿಡುಗು ಹೋಗಬೇಕು. ಇದನ್ನು ಅತಿ ಶೀಘ್ರವಾಗಿ ಸಂಪೂರ್ಣವಾಗಿ ತೊಡೆದುಹಾಕಬೇಕು ಎನ್ನುವುದು ಇಲ್ಲಿಯ ಉದ್ದೇಶವಾಗಿದೆ. ಇದನ್ನು ಹಂತ ಹಂತವಾಗಿ ತೆಗೆದು ಹಾಕಬೇಕಾದರೆ ಹೇಗೆ ತೆಗೆಯಬೇಕು, ಎನ್ನುವ ವಿಚಾರದಲ್ಲಿ ಸರ್ಕಾರಕ್ಕೆ ಈ ವಿಧೇಯಕದ ಮೂಲಕ ಅಧಿಕಾರವನ್ನು ತೆಗೆದುಕೊಳ್ಳಬೇಕಾಗಿದೆ. ಇದರಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ ವಿಚಾರ ; Sir, the power is taken over by the Government under various clauses of this Bill to prohibit collection of capitation fee and regulation of accounts of the Institutions. Anyone of the Institutions which come under the purview of this Bill, if it transgress the rules and regulations and orders passed under this will be liable for penalty. The main thrust of the Bill is prohibition of collection of capitation fee and to regulate the accounts and certain other matters connected with it. Clause 14 of the said Bill empowers the Government to prescribe by rules all or any of the matter to carry out the purposes of the Act. I hope, this is a Bill, which every Member of this House would welcome. There is demand from all the sections of the society in our State that

this pernicious pratice of collection of capitation fee should go. In order to fulfil the deamand of the people, and the deamand of the Members of this House, this Bill has been brought before this Hon'ble House for its consideration. This is timely, well-intended and in our submission, it is intended to do away with the pernicious practice of collection of capitation fee. Therefore, my submission through you Sir, to the Hon'ble Membere of this House is that this Bill may be passed.

ಶ್ರೀ ಕೊಪ್ಪಾದ್. - ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈ ಮಸೂದೆಯನ್ನು ತಂದಿರುವ ಮೂಲ ಉದ್ದೇಶ ಶಾಲಾ ಕಾಲೇಜುಗಳನ್ನು ನಡೆಸತಕ್ಕಂತಹ ಯಜಮಾನರು ವಸೂಲಿ ಮಾಡುತ್ತಿರತಕ್ಕಂತಹ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದು ಹಾಕಬೇಕು ಎಂಬುದು. ಈ ರೀತಿ ಶುಲ್ಕವನ್ನು ವಸೂಲು ಮಾಡುತ್ತಿರತಕ್ಕಂತಹದ್ದು ಸಮಾಜದ ಹಿತದೃಷ್ಟಿಯಿಂದ ಸರಿಯಾದುದಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ಶಾಸಕರು, ಸಭೆಯ ಒಳಗಡೆ, ಹಾಗೂ ಸಭೆಯ ಹೊರಗಡೆ ಹಾಗೂ ಜನರೂ ಕೂಡ ಇದೇ ಅಭಿಪ್ರಾಯವನ್ನು ತಿಳಿಸಿದ ಹಿನ್ನಲೆಯಲ್ಲಿ ಈ ಮಸೂದೆಯನ್ನು ತಂದಿದ್ದೇವೆ. ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡತಕ್ಕಂತಹ ವಿಚಾರದಲ್ಲಿ ಬಂದಂತಹ ತಿಳುವಳಿಕೆಯನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಹತೆಯನ್ನು ಪಡೆಯತಕ್ಕಂತಹವರು ಹಣವನ್ನು ಕೊಟ್ಟು ವಿದ್ಯೆಯನ್ನು ಸಂಪಾದನೆ ಮಾಡತಕ್ಕಂತಹದ್ದು ಸರಿಯಾದುದಲ್ಲ, ಅರ್ಹತೆ ಇರತಕ್ಕಂತಹವರು ತನಗೆ ಬೇಕಾದ ವಿದ್ಯಾರ್ಹತೆಯನ್ನು ಪಡೆಯುವುದಕ್ಕೆ ಸರ್ಕಾರ ಮತ್ತು ಸಮಾಜ ಅವನ ಸಹಾಯಕ್ಕೆ ಬರಬೇಕು ಎಂಬ ಮೂಲ ಉದ್ದೇಶದಿಂದ ಈ ಮಸೂದೆಯನ್ನು ಸಭೆಯ ಒಪ್ಪಿಗೆಗೆ ತರಲಾಗಿದೆ. ಇದು ಬಹಳ ಮುಖ್ಯವಾದ ವಿಚಾರ. ಜನತಾ ಪಾರ್ಟಿ ಸರ್ಕಾರ ಬಂದ ತಕ್ಷಣ ಹೊಸದಾಗಿ ಈ ಮಸೂದೆಯನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಈ ಮಸೂದೆಯನ್ನು ನಾವು ತಂದಿದ್ದಲ್ಲ. ಹಿಂದೆ ಇದ್ದಂತಹ ಸರ್ಕಾರವೂ ಕೂಡ ಕ್ಯಾಪಿಟೇಷನ್ ಶುಲ್ಕವನ್ನು ರದ್ದುಪಡಿಸಬೇಕು, ಆ ಒಂದು ಉದ್ದೇಶಕ್ಕಾಗಿ, ವಿರೋಧ ಪಕ್ಷದವರ ಸಲಹೆಯನ್ನೂ ಕೂಡ ತೆಗೆದುಕೊಂಡು ಹಿಂದೆ ಇದ್ದಂತಹ ಸರ್ಕಾರ 5 ವರ್ಷಗಳ ಅವಧಿಯಲ್ಲಿ ಇದನ್ನು ತೆಗೆಯಬೇಕೆಂಬುದರ ಬಗ್ಗೆ ಎಕ್ಸಿಕ್ಯೂಟಿವ್ ಆರ್ಡರನ್ನು ಹೊರಡಿಸಿತ್ತು. ಆ ಒಂದು ವಿಚಾರವನ್ನೂ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ಈ ಸಮಯದಲ್ಲಿ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಹಿಂದೆ ಹೊರಡಿಸಿದಂತಹ ಎಕ್ಸಿಕ್ಯೂಟಿವ್ ಆರ್ಡರನ್ನು ಕರ್ನಾಟಕ ಹೈಕೋರ್ಟ್ ಅನೂರ್ಜಿತಗೊಳಿಸಿ, ಅದನ್ನು ಕಾನೂನು ರೂಪದಲ್ಲೇ ಮಾಡಬೇಕೆಂದು ತಿಳಿಸಿದ್ದರಿಂದ, ಈ ಮಸೂದೆಯನ್ನು ತಮ್ಮ ಮುಂದೆ ತಂದಿದ್ದೇವೆ. ಎರಡನೆಯ ಮುಖ್ಯ ವಿಚಾರ ಇದರಲ್ಲಿ ಅಡಕವಾಗಿರುವುದೇನೆಂದರೆ, ಇದರಲ್ಲಿ ಯಾವುದೇ ಶುಲ್ಕ ವಸೂಲಿಯಾಗಬೇಕಾದರೂ, ಅಂತಹದ್ದನ್ನು ನಿಯಂತ್ರಣ ಮಾಡುವಂತಹ ಹಕ್ಕನ್ನು ಇಟ್ಟುಕೊಂಡಿರಬೇಕು ಎನ್ನುವ ವಿಚಾರವನ್ನು ಸರ್ಕಾರ ಇಟ್ಟುಕೊಂಡು ಆಜ್ಞೆಗಳ ಮುಖಾಂತರ ನಿಯಂತ್ರಣ ಮಾಡತಕ್ಕಹಂತಹ ವಿಚಾರ ಕೂಡ ಇದರಲ್ಲಿ ಅಡಕವಾಗಿದೆ. ಸರ್ಕಾರ ಈ ಒಂದು ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ, ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡುತ್ತಿರುವುದನ್ನು ನಿಯಂತ್ರಣ ಮಾಡುವಂತಹ ಮೂಲ ಉದ್ದೇಶವನ್ನು ಇಟ್ಟುಕೊಂಡು, ಸರ್ಕಾರ ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬಹುದು, ಆ ಒಂದು ಅಧಿಕಾರವನ್ನು ಸರ್ಕಾರಕ್ಕೆ ಕೊಡತಕ್ಕಂತಹದ್ದು ಈ ಉದ್ದೇಶ ಮಸೂದೆಯಲ್ಲಿ ಅಡಕವಾಗಿದೆ. ಆದ್ದರಿಂದ ಮೂಲ ಉದ್ದೇಶ ಚೆನ್ನಾಗಿದೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು ಈ ಮಸೂದೆಯಲ್ಲಿ ಎಲ್ಲ ವಿವರಗಳೂ ಸಿಕ್ಕದೇ ಇರಬಹುದು. ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದೆ. ಇದರ ಹಿನ್ನಲೆ ಸರ್ಕಾರ ಏನು ಮಾಡಿದೆ ಎಂಬುದು ಬಹುಶಃ ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿಚಾರ ಎಂಬುದಾಗಿ ನಾನು ಭಾವಿಸುತ್ತೇನೆ. ಆದ್ದರಿಂದ ಈ ಮಸೂದೆಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವಂತಹ ಕಾಲದಲ್ಲಿ ಮುಖ್ಯವಾದ ವಿಷಯ ಏನೇ ಇದ್ದರೂ ಮೂಲ ಉದ್ದೇಶ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡುವಂತಹ ಪದ್ಧತಿ ಹೋಗಬೇಕು. ಅದನ್ನು ತಡೆಗಟ್ಟತಕ್ಕಂತಹ ಅಧಿಕಾರ ಸರ್ಕಾರಕ್ಕಿರಬೇಕು. ತೆಗೆದು ಹಾಕತಕ್ಕಂತಹ ಅಧಿಕಾರವನ್ನು ಸರ್ಕಾರದವರು ಯಾವ ರೀತಿ ಉಪಯೋಗಿಸಬಹುದೆಂಬ ಉದ್ದೇಶವನ್ನು ಇಟ್ಟುಕೊಂಡೇ ಈ ಮಸೂದೆಯನ್ನು ತಂದಿದ್ದೇವೆ. ಆದ್ದರಿಂದ ಮೂಲ ಉದ್ದೇಶ ಸರಿಯಾಗಿದೆ, ಇದು ಸರ್ವಮಾನವಾದುದು. ಆದ್ದರಿಂದ ಇದಕ್ಕೆ ಪೂರ್ಣ ಬೆಂಬಲ ಈ ಸಭೆ ಕೊಡಬೇಕೆಂದು ಈ ಸಮಯದಲ್ಲಿ ನಾನು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಈ ಮಸೂದೆಯನ್ನು ತಂದಂತಹ ಮೂಲ ಉದ್ದೇಶವೇನೆಂಬುದನ್ನು ಈಗಾಗಲೇ ಹೇಳಿದರು. ಅದೇನೆಂದರೆ, 5 ವರ್ಷಗಳಲ್ಲಿ

ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ತಡೆಗಟ್ಟುತ್ತೇವೆ ಎಂಬುದಾಗಿ ಹಿಂದೆ ಒಂದು ಎಕ್ಸಿಕ್ಯೂಟಿವ್ ಆರ್ಡರ್ ಇತ್ತು. ಆ ಒಂದು ಹಿನ್ನೆಲೆಯಲ್ಲಿ ಈ ಒಂದು ಮಸೂದೆಯನ್ನು ತಂದು ಕಾನೂನಿನ ಮೂಲಕ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ತಡೆಗಟ್ಟುತ್ತೇವೆಂದು ಹೇಳಿದ್ದಾರೆ, ಸಂತೋಷ. ಆದರೆ ಮೊನ್ನೆ ಏನೊಂದು ಎಕ್ಸಿಕ್ಯೂಟಿವ್ ಆರ್ಡರ್ ಹೊರಡಿಸಿದ್ದಾರೆ, ಅದರಿಂದ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ, ಮುಖ್ಯವಾಗಿ ಹಿಂದುಳಿದ ವರ್ಗದವರಿಗೆ, ಹರಿಜನ–ಗಿರಿಜನರಿಗೆ ಮತ್ತು ಎಕನಾಮಿಕಲ್ ವೀಕರ್ ಸೆಕ್ಷನ್‌ರವರಿಗೆ. (ಮುಂದುವರಿದವರೂ ಎಕನಾಮಿಕಲ್ ವೀಕರ್ ಅಂತ ಹೇಳಬಹುದು) ಅವರಿಗೆ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎನ್ನುವ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇಕಡ 10 ಸೀಟುಗಳನ್ನು ರಿಸರ್ವ್ ಮಾಡಿದ್ದಾರೆ. ಅದು ಹೇಗೆ ಎಂದರೆ, 50ಸಾವಿರ ರೂಪಾಯಿಗಳ ಕ್ಯಾಪಿಟೇಷನ್ ಫೀಯನ್ನು ಕೊಡಬೇಕು, ಜೊತೆಗೆ ಮೆರಿಟ್ ಕೂಡ ಇರಬೇಕು. ಅಂತಹವರಿಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡಿಕೊಳ್ಳಬಹುದು ಎಂಬುದಾಗಿ ಮಾಡಿದ್ದೀರಿ. ಇದರಿಂದ ಹಿಂದುಳಿದವರಿಗೆ, ಹಾಗೂ ಹರಿಜನ–ಗಿರಿಜನರಿಗೆ ಬಹಳ ಅನ್ಯಾಯವಾಗಿದೆ. ಯಾರಿಗೆ ಹಣ ಕೊಡುವುದಕ್ಕೆ ಶಕ್ತಿ ಇದೆಯೋ, ಹಾಗೂ ಮೆರಿಟ್‌ಗಳಿಸಿದ್ದಾರೋ ಅಂತಹವರಿಗೆ ಇದರಿಂದ ಅನುಕೂಲವಾಗುತ್ತದೆಯೇ ಹೊರತು, ಹಣಕೊಡುವಂತಹ ಶಕ್ತಿ ಇದ್ದು, ಮೆರಿಟ್ ಇಲ್ಲದಂತಹ ಹಿಂದುಳಿದವರ್ಗದವರಿಗೆ, ಹಾಗೂ ಹರಿಜನ-ಗಿರಿಜನರಿಗೆ ಇದರಿಂದ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ. ಆದರೆ ಹಿಂದೆ ಇದ್ದಂತಹ ಎಕ್ಸಿಕ್ಯೂಟೀವ್ ಆರ್ಡರ್ ಯಾವ ರೀತಿ ಇತ್ತು ಎಂದರೆ, ಹಳ್ಳಿಯಲ್ಲಿರತಕ್ಕಂತಹ ರೈತರ ಮಕ್ಕಳು, ಎಲ್ಲಿಯಾದರೂ ಪ್ರಯತ್ನ ಪಟ್ಟು 50 ಸಾವಿರ ರೂಪಾಯಿಗಳ ಕ್ಯಾಪಿಟೇಷನ್ ಫೀ ಕೊಟ್ಟರೆ ಮೆರಿಟ್ ಇಲ್ಲದಿದ್ದರೂ ಮೆಡಿಕಲ್ ಕಾಲೇಜುಗಳಲ್ಲಿ ಅಥವಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡಿಕೊಳ್ಳಬಹುದಾಗಿತ್ತು. ಆದರೆ ತಾವು ಈಗ ಏನು ಮಾಡಿದ್ದೀರೆಂದರೆ, ಮುಂದುವರಿದ ಜನಾಂಗದವರಿಗೆ ಸಹಾಯ ಮಾಡುವುದಕ್ಕೋಸ್ಕರ, 50 ಸಾವಿರ ಕ್ಯಾಪಿಟೇಷನ್ ಶುಲ್ಕವನ್ನು ಕೊಡುವಂತಹ ಶಕ್ತಿ ಇದ್ದು, ಮೆರಿಟ್ ಇದ್ದಂತಹವರಿಗೆ ಅವಕಾಶ ಸಿಗಬೇಕೆಂಬ ಉದ್ದೇಶದಿಂದ ಮಾಡಿದ್ದೀರಿ. ನಿಮ್ಮ ಉದ್ದೇಶ ಒಂದು ಕಡೆ ದುಡ್ಡು ಬರುತ್ತದೆ, ಇನ್ನೊಂದು ಕಡೆ ಮೆರಿಟ್ ಇದ್ದಂತಹ ವಿದ್ಯಾರ್ಥಿಗೆ ಸಹಾಯಕವಾಗುತ್ತದೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ. ಆದರೆ ಮೆರಿಟ್ ಇಲ್ಲದೇ ಇರತಕ್ಕಂತಹವರಿಗೂ ಸಮಾಜದಲ್ಲಿ ಸಮಾನವಾಗಿ ಸಹಾಯ ಮಾಡಬೇಕೆಂಬ ಉದ್ದೇಶ ಇದ್ದರೆ ನಾನು ಅದನ್ನು ಒಪ್ಪಿಕೊಳ್ಳುತ್ತಿದ್ದೆ. ಇನ್ನೊಂದು 15 ಪರ್ಸೆಂಟ್ ರಿಸರ್ವೇಸ್ ಕೊಟ್ಟಿದ್ದೀರಿ. 3–4 ಮೆಡಿಕಲ್ ಕಾಲೇಜುಗಳನ್ನು ಬಿಟ್ಟು ಉಳಿದಿರತಕ್ಕಂತಹ ಕಾಲೇಜುಗಳಲ್ಲಿ ಮೆರಿಟ್ ಮೇಲೆ ಮಾಡಬೇಕೆಂದು ಇದೆ. ಕ್ಯಾಪಿಟೇಷನ್ ಫೀಯನ್ನು ಯಾರು ಕೊಡುತ್ತಾರೆ. ಬೊಮ್ಮಾಯಿಯಂತಹವರು, ಮೆರಿಟ್ ಇರತಕ್ಕಂತಹವರು ಕೊಡುತ್ತಾರೆ. ಇವರು ಒಂದು ಕಡೆ ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡುತ್ತೇವೆಂದು ಹೇಳುತ್ತಾರೆ. ಯಾರಿಗೆ ಕ್ಯಾಪಿಟೇಷನ್ ಫೀಯನ್ನು ಕೊಡುವಂತಹ ಶಕ್ತಿ ಇದೆ, ಜೊತೆಗೆ ಮೆರಿಟ್ ಇದೆ, ಅಂತಹವರಿಗೆ ಪರೋಕ್ಷವಾಗಿ ಸಹಾಯ ಮಾಡತಕ್ಕಂತಹ ಸದುದ್ದೇಶ ಮೊನ್ನೆ ಹೊರಡಿಸಿರುವಂತಹ ಎಕ್ಸಿಕ್ಯೂಟೀವ್ ಆರ್ಡರ್‌ನಲ್ಲಿದೆ. ಯಾರು ಸಮಾಜದಲ್ಲಿ ಮುಂದುವರೆದಿದ್ದಾರೆ, ಯಾರಿಗೆ ಕ್ಯಾಪಿಟೇಷನ್ ಹಣವನ್ನು ಕೊಡುವಂತಹ ಶಕ್ತಿ ಇದೆ ಅಂತಹವರಿಗೆ ಸಹಾಯ ಮಾಡುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದೆ ಸರ್ಕಾರ ಹೊರಡಿಸಿದಂತಹ ಆಜ್ಞೆಯಲ್ಲಿ ಏನಿತ್ತು ಅಂದರೆ, ಕರ್ನಾಟಕದ ವಿದ್ಯಾರ್ಥಿಗಳಿಗೆ 50ಸಾವಿರ ಕ್ಯಾಪಿಟೇಷನ್ ಫೀ ಕೊಟ್ಟರೆ ಕೆಲವು ಸೀಟುಗಳನ್ನು ಅವರಿಗೆ ರಿಸರ್ವ್ ಮಾಡಿದ್ದರು. ಮೆರಿಟ್ ಪೂಲ್ ಬೇರೆ ರಿಸರ್ವೇಷನ್ ಬೇರೆ. ಕರ್ನಾಟಕದ ವಿದ್ಯಾರ್ಥಿಗಳಾಗಿದ್ದು ಕ್ಯಾಪಿಟೇಷನ್ ಫೀಯನ್ನು ಕೊಟ್ಟು ಮೆರಿಟ್ ಇದ್ದಂತಹವರಿಗೂ 5 ಅಥವಾ 10 ಸೀಟುಗಳನ್ನು ರಿಸರ್ವ್ ಮಾಡಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ಇದ್ದಂತಹ ಎಕ್ಸಿಕ್ಯೂಟಿವ್ ಆರ್ಡರ್‌ನಲ್ಲಿ ಏನಿತ್ತು ಅಂದರೆ, ಕರ್ನಾಟಕದವರು ಯಾರೂ 50 ಸಾವಿರ ಕ್ಯಾಪಿಟೇಷನ್ ಫೀಯನ್ನು ಕೊಡುತ್ತಾರೋ ಅವರು ಮೆರಿಟ್ ಇಲ್ಲದಿದ್ದರೂ ಮ್ಯಾನೇಜ್‌ಮೆಂಟ್ ಡಿಸ್‌ಕ್ರಿಷನರಿ ಕೋಟಾದಲ್ಲಿ ಕೊಡುತ್ತಿದ್ದರು. ಒಂದು ಕಾಲೇಜಿನಲ್ಲಿ 10 ಸೀಟು ಅಂದರೂ 7–8 ಕಾಲೇಜುಗಳಿಂದ, 70–80 ಸೀಟುಗಳನ್ನು ಈ ತರಹ ಮ್ಯಾನೇಜ್‌ಮೆಂಟ್‌ನವರು ಕೊಡುತ್ತಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—260 ಸೀಟ್ಸ್ ಮೆರಿಟ್‌ಪೂಲ್‌ನಲ್ಲಿ ಇದೆ. ಎಲ್ಲಾ ಪ್ರೈವೇಟ್ ಕಾಲೇಜುಗಳದ್ದೂ ತೆಗೆದುಕೊಂಡರೆ ಇದು ಕಡಿಮೆ ಎಂದು ಹೇಳಬಹುದು. ಇದಲ್ಲದೆ ರಿಸರ್ವೇಷನ್, ಎಸ್‌ಸಿಗೆ ಎಷ್ಟು, ಎಸ್‌ಟಿಗೆ ಎಷ್ಟು, ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಎಷ್ಟು, ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಎಷ್ಟು ಅವೆಲ್ಲವೂ ಬರುತ್ತದೆ. ಈ 10 ಸೀಟ್ಸ್ ಏನು ಇದೆ, 50 ಸಾವಿರ ರೂಪಾಯಿ ಡಿಪಾಸಿಟ್ ಏನು ಕೊಡುತ್ತಾರೆ, ಅದರಲ್ಲಿ ಮೆರಿಟ್ಸ್ ಏತಕ್ಕೆ ಇಟ್ಟಿದ್ದೇವೆ ಎಂದರೆ ಮ್ಯಾನೇಜ್‌ಮೆಂಟ್‌ನವರು ಬೇಕಾದ

ವರಿಗೆ ಕೊಡಬಹುದು ಅನ್ನುವ ಒಂದು ಸಂಶಯಕ್ಕೆ ಆಸ್ಪದ ಇರಬಾರದು ಅಂತ ಆ ರೀತಿ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಈ ಸೀಟುಗಳನ್ನು ಎಲ್ಲರಿಗೂ ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ. —ಮಾಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಮಗೆ ಹೇಳಬೇಕಾದರೆ ಒಂದು ಕಾಲೇಜಿನಲ್ಲಿ ಈ 10 ಸೀಟ್ಸ್ ಏನು ಇದೆ ಇದಕ್ಕೆ 100 ಅರ್ಜಿಗಳು ಬಂದಿರುತ್ತೆ. ಮೆರಿಟ್ ಪ್ರಕಾರ ಒಬ್ಬೊಬ್ಬರೂ 89, 90, 91 ಮಾರ್ಕ್ಸ್ ತೆಗೆದುಕೊಂಡಿರುತ್ತಾರೆ. ಅವರೆಲ್ಲಾ ಒಂದೇ ಕೋಮಿನವರಾಗಿರಬಹುದು. ನೀವು ಅವರಿಗೆಲ್ಲಾ ಒಬ್ಲೈಜ್ ಮಾಡಲೇ ಬೇಕಾಗುತ್ತದೆ. ಅದರಲ್ಲಿ ಏನೂ ಡಿಸ್ಕ್ರಿಮಿನೇಷನ್ ಮಾಡುವ ಹಾಗೇ ಇಲ್ಲ. ನಿಮ್ಮ ಡೈರೆಕ್ಷನ್ ಪ್ರಕಾರ ಅವರು ಫಾಲೋ ಮಾಡಬೇಕಾಗುತ್ತದೆ. 50 ಸಾವಿರ ರೂಪಾಯಿ ಡಿಪಾಸಿಟ್ ಕಟ್ಟಿದರೂ ಕೂಡ ಮುಂದುವರೆದ ಜನಾಂಗಕ್ಕೆ ಹೇಗೆ ಸಿಕ್ಕುತ್ತದೆ ? ಒಂದೇ ಕೋಮಿನವರು ಹೆಚ್ಚು ಮೆರಿಟ್ ಇರುವಾಗ ಈ ರಿಸರ್ವೇಷನ್ ಎಲ್ಲರಿಗೂ ಹೇಗೆ ಡಿಸ್ಟ್ರಿಬ್ಯೂಟ್ ಆಗುತ್ತದೆ. ದಯಮಾಡಿ ಹೇಳುತ್ತೀರಾ ?

Sri Y. RAMAKRISHNA.—I want to know who is the concerned Minister in charge of the Bill becasue we have to seek clarifications.

Mr. DEPUTY SPEAKER —He has gone with my permission He will come back within a few minutes. He has requested Hon. Minister Sri Bommai to take notes.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಬರೇ ಎಜ್ಯುಕೇಷನ್‌ಗೆ ಮಾತ್ರ ಸಂಬಂಧಪಟ್ಟದ್ದಲ್ಲ ಮೆಡಿಕಲ್ ಎಜುಕೇಷನ್‌ಗೂ ಸಂಬಂಧಪಟ್ಟದ್ದು ಇದೆ. ಶ್ರೀಮಾನ್ ರಾಚಯ್ಯನವರು ಈಗ ಇಲ್ಲಿ ಇಲ್ಲ. ಶ್ರೀಮಾನ್ ಸಿಂಧ್ಯ ಅವರು ಆ ಕಡೆ ಇದ್ದಾರೆ. ಈ ಡಿಬೇಟ್‌ನಲ್ಲಿ ಅವರೂ ಸಹ ಭಾಗವಹಿಸಿದರೆ ಒಳ್ಳೆಯದು. ಈ ಒಂದು ಮಸೂದೆಯನ್ನು ಶ್ರೀಮಾನ್ ರಾಚಯ್ಯನವರು ಇಂಟ್ರಡ್ಯೂಸ್ ಮಾಡಬೇಕು. ಈಗ ಮಾನ್ಯ ರಾಚಯ್ಯನವರು ಸಭೆಯಲ್ಲಿ ಇರಬೇಕಾಗಿತ್ತು. ಇಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ. ಅವರಿಗೆ ಹೇಳಿ ಕರೆಸಬೇಕು. ಇದರ ಬಗ್ಗೆ ನಾವು ಕ್ಲಾರಿಫಿಕೇಷನ್ ಕೇಳುವಾಗ ಮಾನ್ಯ ಆರೋಗ್ಯ ಸಚಿವರೂ ಸಹ ಇದ್ದರೆ ಒಳ್ಳೆಯದು. ಇದರ ಬಗ್ಗೆ ಏನು ಒಂದು ಸಬ್ ಕಮಿಟಿ ಮಾಡಿದ್ದರೋ ಅದನ್ನು ಕೂಡಲೇ ಅಬಾಲಿಷ್ ಮಾಡಿದರು, ಅನಂತರ ಬದಲಾವಣೆಯನ್ನೂ ಸಹ ಮಾಡಿದರು. I think he is more progressive than any one of you. It looks like that.

Sri S. R. BOMMAI.—I am proud of him. ನೀವು ಇದ್ದಾಗ ಇದು ಆಗಲಿಲ್ಲಾ.

ಶ್ರೀ ಬಿ. ಶಿವಣ್ಣ.—ಈಗ ಲಾ ಮಿನಿಸ್ಟರ್ ಇಲ್ಲ, ಶ್ರೀಮಾನ್ ರಾಚಯ್ಯನವರೂ ಇಲ್ಲ.

ಉಪಸಭಾಧ್ಯಕ್ಷರು.—ಶ್ರೀಮಾನ್ ರಾಚಯ್ಯನವರು ಆರೋಗ್ಯ ಸರಿಯಿಲ್ಲ ಎಂದು ಒಂದು ಪತ್ರವನ್ನು ಕಳುಹಿಸಿದ್ದಾರೆ. ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ.

(ಗೊಂದಲ)

ಶ್ರೀ ಜಿ. ಪಿ. ಒಡೆಯರಾಜ್.—ಇದು ಸಭೆಯ ಗೌರವ ಘನತೆ ಪ್ರಶ್ನೆ. ಈ ರೀತಿ ಅವರು ನಡೆದುಕೊಂಡರೆ ಹೇಗೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಿಂದೆ ಕ್ಯಾಪಿಟೇಷನ್ ಫೀಸ್ ಬಗ್ಗೆ ಹೇಗೆ ಮಾಡಿದರು, ಯಾವ ರೀತಿಯಾಗಿ ಸೀಟುಗಳನ್ನು ಹಂಚಿದ್ದಾರೆ ಅನ್ನುವುದು ತಮಗೆ ಗೊತ್ತಿದೆ.

(ಗೊಂದಲ)

Sri MALLIKARJUNA KHARGE.—I don't care for that.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಿಂದೆ ಏನು ನಡೆಯಿತು, ಅದನ್ನು ಹೇಳಬೇಕಲ್ಲಾ.

Sri MALLIKARJUNA KHARGE.—That is a different matter. I am asking you how many seats you have kept reserved under this category of Rs. 50,000 deposit.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕುಂಬಳಕಾಯಿ ಕಳ್ಳ ಎಂದರೆ ಇವರೇಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು ಸ್ವಾಮಿ.

ಶ್ರೀ ವಿ. ಎಸ್. ಆಚಾರ್.—ಈ ವಿದ್ಯಾ ಸಂಸ್ಥೆ ಏನು ಇದೆ ಇದಕ್ಕೆ ದಾನ ಶುಲ್ಕ ಕೊಟ್ಟರೆ ಮಾತ್ರ ಪ್ರವೇಶ ಅಂತ ಕಾಣುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಈಗೆ ಸಂಬಂಧಪಟ್ಟ ಮಂತ್ರಿಗಳಾದ ವಿದ್ಯಾ ಮಂತ್ರಿಗಳು ಸಭೆಯಲ್ಲಿ ಇಲ್ಲವಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿದ್ಯಾ ಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲ. ಅವರು ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ವಿದ್ಯಾಮಂತ್ರಿಗಳು ಇಲ್ಲದೇ ಹೋದಮೇಲೆ ನಾವು ಚರ್ಚೆ ಮಾಡು ವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಪ್ರಾರಂಭವಾಗಿದೆಯೋ ?

ಉಪಸಭಾಧ್ಯಕ್ಷರು.—ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುವುದರ ಉದ್ದೇಶವಾದರೂ ಇಷ್ಟೇ. ಇದು ಸಣ್ಣ ವಿಚಾರ ಅಲ್ಲ. ಈ ಮಾತನ್ನು ತಾವೂ ಕೂಡ ಒಪ್ಪುತ್ತೀರಾ ಎಂದು ನಾನು ಭಾವಿಸಿದ್ದೇನೆ. ಈ ಮಸೂದೆಯನ್ನು ಈ ಹೊತ್ತೇ ಪಾಸ್ ಮಾಡಬೇಕು ಎಂದರೆ ಹೇಗೆ ? ಈವೊತ್ತೆ ಪಾಸ್ ಮಾಡಬೇಕೇ ?

ಶ್ರೀ ಎ. ಲಕ್ಷ್ಮೀಸಾಗರ್.—ಅಂಥಾದ್ದೇನೂ ಇಲ್ಲ. ನಿಮಗೆ ಬೇಕಾದಷ್ಟು ಕಾಲಾವಕಾಶ ತೆಗೆದು ಕೊಳ್ಳಿ. ಇದರ ಮೇಲೆ ಸಂಪೂರ್ಣವಾಗಿ ತಿಳಿಸುವ ಅವಕಾಶ ನಿಮಗೆ ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆ ನಡೆಯಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸದು ಸಣ್ಣ ವಿಚಾರ ಅಲ್ಲ. ಅನೇಕ ಜನರು ಇದರ ಬಗ್ಗೆ ಮಾತ ನಾಡಬೇಕಾಗಿರುವುದರಿಂದ ಇದಕ್ಕೆ ಹೆಚ್ಚಿನ ಒಂದು ಕಾಲವನ್ನು ವಿನಿಯೋಗ ಮಾಡಬೇಕಾಗುತ್ತದೆ. ಈ ವಿಚಾರ ಲಕ್ಷಾಂತರ ಜನರ ತಲೆ ತಿನ್ನತಕ್ಕಂಥಾ ವಿಚಾರವಾಗಿದೆ. ಈ ಒಂದು ಮಸೂದೆಯ ಪುಸ್ತಕ ಚಿಕ್ಕದಾಗಿದ್ದರೂ ಕೂಡ ಇದರಲ್ಲಿರುವ ವಿಷಯ ದೊಡ್ಡ ರಾದ್ಧಾಂತದ ವಿಷಯವಾಗಿದೆ. ಆದುದರಿಂದ ಬೇರೆಯವರೂ ಸಹ ಇದರ ಬಗ್ಗೆ ಮಾತನಾಡಲು ಈ ಹೊತ್ತು ಮತ್ತು ನಾಳೆಯೂ ಸಹ ಮುಂದುವರೆ ಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇದನ್ನು ಈವೊತ್ತು ಚರ್ಚೆ ಮಾಡಲಿಕ್ಕೆ ತಂದಿದ್ದೇವೆ. ಶ್ರೀಮಾನ್ ಬಂಗಾರಪ್ಪನವರ ಅಭಿಪ್ರಾಯವನ್ನು ಮೊಟಕುಗೊಳಿಸಬೇಕು ಅನ್ನುವ ಅಭಿಪ್ರಾಯ ನಮಗೆ ಇಲ್ಲ. ಜನರ ಮನಸ್ಸಿನಲ್ಲಿ ಇದರ ಬಗ್ಗೆ ಜನ ಜನಿತವಾಗಿರುವ ವಿಷಯ ಎಲ್ಲರಿಗೂ ಗೊತ್ತಿರತಕ್ಕಂಥಾ ವಿಷಯ. ಅವರ ಮನಸ್ಸಿನಲ್ಲಿ ಏನು ಇದೆ ಅವರ ರೂಪರೇಷೆಗಳು ಏನು ಇವೆ ಅದನ್ನು ಕೂಲಂಕುಷವಾಗಿ ತಿಳಿಸುವುದಕ್ಕೆ, ಅದರ ಬಗ್ಗೆ ಪದರ ಪದರವಾಗಿ ಈ ಸಭೆಗೆ ತಿಳಿಸುವುದಕ್ಕೆ ಅವಕಾಶ ಇದೆ, ಅವರು ಬಹಳ ಮೇಧಾವಿಗಳು, ಅವರು ಕೊಟ್ಟಂಥಾ ಅಭಿ ಪ್ರಾಯಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ.

ಡಾ॥ ಎಂ. ಪಿ. ಕರ್ಕಿ.—ಅಧ್ಯಕ್ಷರೇ, ಈ ಬಿಲ್ ನಮಗೆ ರಾತ್ರಿ ತಲುಪಿಸಿರಲಿಲ್ಲ, ಇಲ್ಲಿಗೆ ಬಂದ ಮೇಲೆ ನಮ್ಮ ಕೈ ಸೇರಿದೆ, ಈ ಬಿಲ್ಲಿನ ಮೇಲೆ ಹೆಚ್ಚಿನ ಅಭ್ಯಾಸ ಮಾಡುವುದು ಅಗತ್ಯ ಇದೆ. ಪ್ರತಿ ಯೊಂದು ಇದರಲ್ಲಿರುವ ಅಂಶವನ್ನೂ ಕೂಡ ಗಮನಿಸಿ ಮಾತನಾಡಬೇಕಾಗುತ್ತದೆ. ಇದು ಲಕ್ಷಾಂತರ ಜನರ ಜೀವನದ ಸಮಸ್ಯೆಯಾಗಿದೆ. ಆದುದರಿಂದ ಇದನ್ನು ಆತುರಾತುರವಾಗಿ ಪಾಸ್ ಮಾಡದೆ ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಉಪಸಭಾಧ್ಯಕ್ಷರು. – ಈ ಬಿಲ್ಲನ್ನು ಮಾನ್ಯ ಸದಸ್ಯರಿಗೆಲ್ಲಾ ತಲುಪಿಸಿದ್ದೇವೆ ಅಲ್ಲದೆ ಗೆಜೆಟ್‌ನಲ್ಲೂ ಕೂಡ ಇದು ಪ್ರಕಟವಾಗಿದೆ. ಇದರ ಮೇಲೆ ಚರ್ಚೆ ನಡೆಯಲಿ.

ಶ್ರೀ ಭೀಮಣ್ಣ ಖಂಡ್ರೆ.—ತಾವು ಪ್ರಾರಂಭಿಸಿರುವ ಬಿಲ್ ಕಾಪಿಯನ್ನು ಈ ಒಂದು ನಿಮಿಷದಲ್ಲಿ ನಮಗೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕ್ಯಾಪಿಟೇಷನ್ ಪಿಡುಗು ಹೋಗಬೇಕು ಎಂದು ಹೇಳಿ ಸದಸ್ಯರುಗಳು ತಮ್ಮ ಅಮೂಲ್ಯವಾದ ಸಲಹೆಗಳನ್ನು ಇಲ್ಲಿ ಕೊಡಬೇಕಾಗಿದೆ. ಈ ವಿಷಯದಲ್ಲಿ ಕಾಲದ ಮಿತಿಯನ್ನು ಹಾಕುವುದು ಬೇಡ.

ಉಪಸಭಾಧ್ಯಕ್ಷರು.—ಚರ್ಚೆಯಾಗಲೇ ಪ್ರಾರಂಭವಾಗಿದೆ. ಆರ್ಡಿನೆನ್ಸ್ ಕಾಪಿ ಗೆಜೆಟ್ಟಿನಲ್ಲಿ ಬಂದು ಇದು ಎಲ್ಲಾ ಸದಸ್ಯರಿಗೂ ತಲುಪಿರುತ್ತದೆ.

ಶ್ರೀ ಎಸ್. ಬಂಗಾರಪ್ಪ.–ಆರ್ಡಿನೆನ್ಸ್‌ನನ್ನು ಬಿಲ್ ಮೂಲಕ ಇಂಟ್ರಡ್ಯೂಸ್ ಮಾಡಬೇಕಾದರೆ ಬಿಲ್‌ನಲ್ಲಿ ಕೆಲವೊಂದು ಹೊಸ ವಿಚಾರಗಳನ್ನು ತರುವುದಕ್ಕೆ ಕೂಡ ಸಾಧ್ಯವಿರುತ್ತದೆ. ಆದ್ದರಿಂದ ನಾವು ಆರ್ಡಿನೆನ್ಸ್ ಮತ್ತು ಬಿಲ್ಲನ್ನು ಇಲ್ಲಿ ಹೋಲಿಕೆ ಮಾಡತಕ್ಕದ್ದು ಅವಶ್ಯಕವಿರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಮಾನ್ಯ ಖರ್ಗೆ ಯವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಆಚಾರ್ ಅವರೂ ಹೇಳುತ್ತಿ ದ್ದಾರೆ. ಆರ್ಡಿನೆನ್ಸ್ ಯಾವರೀತಿಯಲ್ಲಿತ್ತೋ ಅದೇ ರೀತಿಯಲ್ಲಿ ಬಿಲ್ ಇದೆ. ಯಾವ ರೀತಿಯ

ಬದಲಾವಣೆಯನ್ನೂ ಸಹ ನಾವೂ ಮಾಡಿಲ್ಲ. ತದ್‌ರೂಪದಲ್ಲಿಯೇ ನಾವು ಬಿಲ್‌ನ್ನು ತಂದಿದ್ದೇವೆ. ನಾಳೆಯೂ ಕೂಡ ಇದನ್ನು ಚರ್ಚೆ ಮಾಡೋಣ.

ಶ್ರೀ ವೈ. ರಾಮಕೃಷ್ಣ.—ಚರ್ಚೆಯನ್ನು ನಾವು ಯಾರ ಜೊತೆಯಲ್ಲಿ ಮಾಡಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರ.

SRI A. LAKSHMISAGAR (Hon'ble Minister for Law and Parliamentary Affairs & Public Grievances).—Sir, my learned friend knows the position. This House knows that Sri Rachaiah is not doing well. So, I have undertaken to pilot the Bill. I am with in the constitutional limits.

ಶ್ರೀ ವೈ. ರಾಮಕೃಷ್ಣ.—ಈ ಬಿಲ್ಲಿನ ಬದಲು ಬೇರೆಯ ಬಿಲ್ಲನ್ನು ನಾವು ತೆಗೆದುಕೊಳ್ಳಬಹುದಲ್ಲವೇ ?

ಶ್ರೀ ಕೆ. ಹೆಚ್. ರಂಗನಾಥ್.—ಆರ್ಡಿನೆನ್ಸ್ ಬಂದ ಮೇಲೆ ಸರ್ಕಾರದಿಂದ ಇನ್ನೊಂದು ಗವರ್ನಮೆಂಟ್ ಆರ್ಡರನ್ನು ಹೊರಡಿಸಿದ್ದಾರೆ. ಅದರ ಕಾಪಿಯನ್ನೂ ಸಹ ನಮಗೆ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಒಂದು ಕಾಪಿಯನ್ನೂ ಸಹ ನಮಗೆ ಒದಗಿಸಿ ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಈ ಬಿಲ್ಲಿನಲ್ಲಿ ಅನೇಕ ವಿಚಾರಗಳಲ್ಲದೆ 50 ಪರ್ಸೆಂಟ್ ಸೀಟನ್ನು ಬೇರೆ ರಾಜ್ಯಗಳಿಗೆ ಮನ ಬಂದಂತೆ ಮಾರಾಟ ಮಾಡತಕ್ಕಂಥ ಅವಕಾಶವನ್ನೂ ಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ನಾವು ವಿವರವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಹೋದ ವರ್ಷ ಒಂದು ರೀತಿಯ ನಿಯಮ ಇದ್ದು ಈ ವರ್ಷ ಬೇರೆ ರೀತಿಯಾಗಿದೆ. ನ್ಯಾಯವಾಗಿ ಇದನ್ನೆಲ್ಲಾ ಅಬಾಲಿಷ್ ಮಾಡಬೇಕು. ಎಂದು ಹೇಳುತ್ತಿದ್ದ ಜನ ಇವರು. ಈ ಮಧ್ಯೆ, ಮಾನ್ಯ ಮಂತ್ರಿಗಳಾದ ಸಿಂಧ್ಯಾ ಅವರು ಒಂದು ಸಬ್ ಕಮಿಟಿ ಮಾಡಿ ಅವರು ಇದನ್ನು ಸಂಪೂರ್ಣವಾಗಿ ವಜಾ ಮಾಡಬೇಕು ಎಂದು ವರದಿಯನ್ನು ಕೊಟ್ಟಿದ್ದಾರೆ, ಇದು ಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ. ತದನಂತರ ಮಂತ್ರಿ ಮಂಡಲ ಸಭೆ ಸೇರಿ ಇದರ ಬಗ್ಗೆ ಒಂದು ನೋಟಿಫಿಕೇಷನ್‌ಅನ್ನು ಹೊರಡಿಸಿದರು. ಅದರ ಪ್ರತಿಯೂ ಕೂಡ ನಮ್ಮ ಮುಂದೆ ಇಲ್ಲ. ಇವೆಲ್ಲಾ ಪ್ರತಿಗಳನ್ನು ನಮಗೆ ಒದಗಿಸಿಕೊಟ್ಟರೆ ನಾವು ಸರ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಸಲಹೆಗಳನ್ನು ಕೊಡಲಿಕ್ಕೆ ಅವಕಾಶವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರದವರು ತೆಗೆದುಕೊಂಡ ಕ್ರಮ ಸರಿಯಾಗಿದೆಯೇ ಇಲ್ಲವೇ ಕ್ಯಾಪಿಟೇಷನ್ ಫೀಯನ್ನು ತೆಗೆದುಹಾಕಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಪಕ್ಕದ ರಾಜ್ಯದಲ್ಲಿ ಕ್ಯಾಪಿಟೇಷನ್ ಫೀಯನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದಾರೆ. ಚುನಾವಣಾ ಹೇಳಿಕೆಯಲ್ಲಿ ರಾಜ್ಯದಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ವಜಾ ಮಾಡುತ್ತೇವೆಂದು ಹೇಳಿರತಕ್ಕದ್ದು ಕೂಡ ಈಗ ತಂದಿರತಕ್ಕದ್ದನ್ನು ನೋಡಿದರೆ ಸುಮಾರು 50 ಪರ್ಸೆಂಟ್ ಸೀಟುಗಳು ಬೇರೆ ರಾಜ್ಯಗಳಿಗೆ ಮಾರಾಟ ಮಾಡುವ ಸ್ಥಿತಿ ಉದ್ಭವವಾಗಿದೆಯೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಉಪಸಭಾಧ್ಯಕ್ಷರು.—ಈಗಾಗಲೇ ಇದರ ಬಗ್ಗೆ ಚರ್ಚೆ ಪ್ರಾರಂಭವಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಇದು ಸಾಮಾಜಿಕ ವ್ಯವಸ್ಥೆಗೆ ಸಂಬಂಧಪಟ್ಟ ಕಾನೂನು. ಇದು ಐ ಪಿ ಸಿ ಮತ್ತು ಸಿ ಆರ್ ಪಿ ಸಿ ತರಹ ಕಾನೂನು ಅಲ್ಲ. ಇದಕ್ಕೆ ನೇಮಕವಾದ ಸಮಿತಿಯವರು ಏನು ವರದಿ ಕೊಟ್ಟಿದ್ದಾರೆ. ಮಂತ್ರಿ ಮಂಡಲದಲ್ಲಿ ಯಾವ ರೀತಿಯ ನಿರ್ಣಯವಾಗಿದೆ, ನೋಟಿಫಿಕೇಷನ್ ಯಾವ ರೀತಿಯಲ್ಲಿದೆ, ಇದರಲ್ಲಿ ಕೆಲವು ವಿಚಾರಗಳನ್ನು ನಮಗೆ ಹೇಳಲಿಕ್ಕಾಗುವುದಿಲ್ಲವೆಂದು ಹೇಳಬಹುದು. ಆದರೆ ನನಗೆ ಕಿವಿಗೆ ಬಿದ್ದ ಹಾಗೆ ಇದು ಮಂತ್ರಿಮಂಡಲದಲ್ಲಿ ತೀರ್ಮಾನವಾಗುವುದಕ್ಕೆ ಮುಂಚೆ ಕೆಲವು ಖಾಸಗೀ ವಿದ್ಯಾ ಸಂಸ್ಥೆಗಳವರಿಗೆ ಸಂಬಂಧ ಪಟ್ಟ ವಿಷಯಗಳು ಹೋಗುತ್ತವೆಂದು ಗೊತ್ತಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಇಡೀ ರಾಜ್ಯದ ಗಮನವನ್ನು ಸೆಳೆದಿರತಕ್ಕ ವಿಚಾರ. ಈ ವಿಚಾರದಲ್ಲಿ ಸರ್ಕಾರದವರು ಒಂದು ಆರ್ಡಿನೆನ್ಸ್ ಹೊರಡಿಸಿದ್ದಾರೆ. ಇದಾದ ಮೇಲೆ ಈ ಮಸೂದೆಯನ್ನು ಇಲ್ಲಿ ಮಂಡಿಸಿದ್ದೇವೆ ಇದರ ಬಗ್ಗೆ ಚರ್ಚೆ ಆಗಲೇ ಪ್ರಾರಂಭವಾಗಿದೆ. ಚರ್ಚೆ ನಡೆದಾಗ ಸದಸ್ಯರು ಏನೇನು ವಿಚಾರಗಳನ್ನು ಹೇಳಬೇಕೋ ಅವುಗಳನ್ನು ಹೇಳಲಿಕ್ಕೆ ಮುಕ್ತವಾದ ಅವಕಾಶವಿದೆ. ಸರ್ಕಾರದವರು ತಪ್ಪು ಮಾಡಿದ್ದರೆ ಅವನ್ನು ಹೇಳಲಿಕ್ಕೆ ಅವಕಾಶ ಇದೆ. ಹಿಂದೆ ಏನು ನಡೆದಿದೆ ಅದನ್ನೂ ಹೇಳಲಿಕ್ಕೆ ಇಲ್ಲಿ ಅವಕಾಶವಿದೆ. ಹಿಂದೆ ಏನೇನು ಈ ವಿಷಯದ ಬಗ್ಗೆ ನಡೆದಿದೆ, ಹಿಂದಿನ ಮಂತ್ರಿ ಮಂಡಲದಲ್ಲಿ ಈ ವಿಷಯದಲ್ಲಿ ಯಾವ ನಿರ್ಣಯ ವನ್ನು ತೆಗೆದುಕೊಳ್ಳಲಾಗಿದೆ, ಕಳೆದ ಮೂರು ವರ್ಷಗಳಲ್ಲಿ ಈ ಬಗ್ಗೆ ಏನು ನಡೆದಿದೆ, ಈ ಆರು ತಿಂಗಳಲ್ಲಿ ಏನು ನಡೆದಿದೆ ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಇಲ್ಲಿ ನಾವು ಎಲ್ಲಾ ವಿಷಯಗಳನ್ನು ಮುಕ್ತ ಮನಸ್ಸಿನಿಂದ ಚರ್ಚೆ ಮಾಡೋಣ. ಈ ಮಸೂದೆಗೆ ಅವಶ್ಯಕತೆ ಬಿದ್ದರೆ ತಿದ್ದುಪಡಿಗಳನ್ನೂ ನಾವು ತರಬಹುದು. ಈ ಒಂದು ಪಿಡುಗನ್ನು ತೊಡೆದು ಹಾಕಲಿಕ್ಕೆ ನಾವು ಮುಕ್ತ ಮನಸ್ಸಿನಿಂದ ಚರ್ಚೆ ಮಾಡೋಣ. ಗುಮಾನಿಯಿಂದ ಮಾತನಾಡು

ವುದು ಬೇಡ ಇದು ಸರ್ಕಾರದ ಉದ್ದೇಶ. ಕಾನೂನು ಮಾಡದೆ ಒಂದು ಎಕ್ಸಿಕ್ಯುಟೀವ್ ಆರ್ಡರ್ ಮಾಡಿ ಅದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಸಿಕ್ಕುವ ರೀತಿಯಲ್ಲಿ ಮಾಡಿದರೆ ಹೇಗೆ ? ಮ್ಯಾನೇಜ್‌ಮೆಂಟಿನವರಿಗೆ ದುಡ್ಡು ಮಾಡಲಿಕ್ಕೆ ಅವಕಾಶವಾಗಿದೆ ಇದರಿಂದ. ನಾವು ಆ ರೀತಿ ಮಾಡದೆ, ಸಭೆಯ ಮುಂದೆ ಈ ಒಂದು ಮಸೂದೆಯನ್ನು ಮಂಡಿಸಿದ್ದೇವೆ. ಇದರ ಬಗ್ಗೆ ಮುಕ್ತ ರೀತಿಯಲ್ಲಿ ಚರ್ಚೆ ಮಾಡತಕ್ಕ ಅವಕಾಶವಿದೆ. ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಧೈರ್ಯವನ್ನು ನಾವು ಮೆಚ್ಚಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ. ಈ ಮಸೂದೆ ಸಾಮಾಜಿಕವಾಗಿ ಹೆಚ್ಚಿನ ಪರಿಣಾಮಕಾರಿಯಾದ ಮಸೂದೆ ಎನ್ನುವ ಮಾತನ್ನು ಹೇಳಿದರು. ಇದರ ಬಗ್ಗೆ ಹಿಂದೆ ಏನೇನು ನಡೆದಿದೆ ಅದೂ ಕೂಡ ತಮಗೆ ಗೊತ್ತಿದೆ, ಅದರ ಬಗ್ಗೆ ಇಲ್ಲಿಯೂ ಚರ್ಚೆಯಾಗಬಹುದು. ಅಲ್ಲದೆ ಅವರು ನೋಟಿಫಿಕೇಷನ್ನನ್ನು ಸದಸ್ಯರಿಗೆ ಒದಗಿಸಿ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ತಮಗೆ ಗೊತ್ತಿದ್ದ ಹಾಗೆ ಸದಸ್ಯರಿಗೆ ನೋಟಿಫಿಕೇಷನ್ಸ್ ಒದಗಿಸಿ ಕೊಡುವಂಥ ರೂಢಿಯಿಲ್ಲ. ಸರ್ಕಾರಿ ಆಜ್ಞೆಗಳು ಗಜೆಟ್ ಮೂಲಕ ಸದಸ್ಯರಿಗೆ ಒದಗಿಸುವ ವ್ಯವಸ್ಥೆ ಈಗಾಗಲೇ ಇದೆ. ಇದನ್ನು ಲೆಜಿಸ್ಲೇಜರ್ ಮುಖಾಂತರ ಒದಗಿಸುವ ರೂಲ್ ಇಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ನನ್ನ ವಿನಂತಿ. ಸರ್ಕಾರಿ ಆಜ್ಞೆಗೂ ಮತ್ತು ನಾವು ತಂದಿರುವ ಕಾನೂನಿಗೂ ವ್ಯತಿರಿಕ್ತವಾದ ಅಂಶಗಳು ಇದ್ದರೆ, ನಾವು ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆಯೋ ಆ ಉದ್ದೇಶಕ್ಕೆ ಸರ್ಕಾರಿ ಆಜ್ಞೆ ವಿರೋಧವಾಗಿದ್ದರೆ ಅದನ್ನೂ ಕೂಡ ತಾವು ಎತ್ತಿ ತೋರಿಸತಕ್ಕ ಹಕ್ಕು ತಮಗೆ ಇದೆ. ಇಲ್ಲಿ ಚರ್ಚೆಗೆ ಅನುಕೂಲವಾಗುವ ದೃಷ್ಟಿಯಿಂದ ಆ ನೋಟಿಫಿಕೇಷನ್ನನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುವ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಇದರ ಮೇಲೆ ಚರ್ಚೆ ಪ್ರಾರಂಭವಾಗಿದೆ, ಚರ್ಚೆಯನ್ನು ಮುಂದುವರಿವುದಕ್ಕೆ ಸಹಕರಿಸಬೇಕು.

ಶ್ರೀ ಎನ್. ಜಿ. ನಾಯಕ್.—ಕನ್ನಡದಲ್ಲಿ ಈ ಬಿಲ್ಲನ್ನು ಏಕೆ ತಯಾರು ಮಾಡಿಲ್ಲ. ನಾವು ಪದೇ ಪದೇ ಕನ್ನಡದಲ್ಲಿ ಭಾಷಣ ಮಾಡಬೇಕು ಎಂದು ಹೇಳುತ್ತಾ ಇರುತ್ತೇವೆ. . ಆದರೆ ಈ ಬಿಲ್ಲನ್ನು ಇಂಗ್ಲೀಷಿನಲ್ಲಿ ತಯಾರು ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಕ್ಯಾಪಿಟೇಷನ್ ಶುಲ್ಕದ ರದ್ದತಿಯ ಬಗ್ಗೆ ಇರತಕ್ಕ ಪ್ರಮುಖವಾದಂಥ ಒಂದು ಕಾನೂನು ಅಂದರೆ ಕ್ಲಾಸ್-3. ಕ್ಲಾಸ್-3 ಕ್ಯಾಪಿಟೇಷನ್ ಶುಲ್ಕಕ್ಕೆ ಸಂಬಂಧಪಟ್ಟಿದ್ದು. ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡಬೇಕು ಎಂದು ಕ್ಲಾಸ್-3ರಲ್ಲಿ ಏನು ಹೇಳಿದೆ, ಅದಕ್ಕೆ ಸಂಬಂಧಪಟ್ಟ ಪ್ರಾವಿಸೊ ಏನಿದೆ ಅದಕ್ಕೆ ಕೊಟ್ಟಂಥ ನೋಟಿಫಿಕೇಷನ್‌ನ್ನು ಈಗ ಎಲ್ಲರೂ ಕೇಳುತ್ತಾ ಇರತಕ್ಕಂಥಾದ್ದು. ಆ ನೋಟಿಫಿಕೇಷನ್ ಇದರಲ್ಲಿ ಬಹಳ ಮುಖ್ಯವಾದುದು. ಇದು ಏನಾಗಿದೆಯೆಂದರೆ, ಒಂದು ರೀತಿಯ ಲೈಸನ್ಸನ್ನು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಕೊಟ್ಟ ಹಾಗೆ. ಆ ಲೈಸನ್ಸನ್ನು ಪಾಸ್ ಮಾಡಲಿಕ್ಕೆ ನಾವು ತಯಾರಿಲ್ಲ.

Sri A. LAKSHMISAGAR.—Licence is also subject to law.

ಶ್ರೀ ಎಂ. ವೀರಪ್ಪ ಮೊಯಿಲಿ.—ಲೈಸನ್ಸ್ ಮುಖಾಂತರ ಏನು ಕೊಟ್ಟಿದೆ ಎನ್ನುವುದು ಬಹಳ ಮುಖ್ಯವಾದುದು.

ಶ್ರೀ ಸಿ. ಬೈರೇಗೌಡ.—ಮಾನ್ಯ ಮೊಯಿಲಿಯವರ ಕಾಲದಲ್ಲಿ ಈ ಲೈಸನ್ಸ್ ಬಹಳ ದುಬಾರಿಯಾಗಿತ್ತು, ಈಗ ಫ್ರೀಯಾಗಿ ಸಿಗುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಷ್ಟವೇನೆಂದರೆ, ಹಿಂದೆ ಲೈಸೆನ್ಸ್ ಇಲ್ಲದೆ ಎಲ್ಲಾ ಕೆಲಸ ಮಾಡಿಬಿಟ್ಟಿದ್ದೀರಿ. ಲೈಸನ್ಸ್ ಇಲ್ಲದೆ ಸೀಟುಗಳನ್ನು ಹೆಚ್ಚು ಮಾಡಿದ್ದಿರಿ, ಹಣ ವಸೂಲಾಗಿದೆ. ಅದಕ್ಕೆ ಯೂನಿವರ್ಸಿಟಿ ಅಪ್ಪಣೆಯಿಲ್ಲ, ಮತ್ತು ಸರ್ಕಾರದ ಅಪ್ಪಣೆಯಿಲ್ಲದೆ ಮಾಡಿಬಿಟ್ಟಿದ್ದಾರೆ. You have done without licence, without law. ಲೈಸನ್ಸ್ ಇಲ್ಲದೆ ಮನಬಂದಂತೆ ಮಾಡಿದ್ದಾರೆ, ಆದ್ದರಿಂದ ಅವರಿಗೆ ಬಹಳ ಕಷ್ಟವಾಗಿದೆ. ಈಗ ಆ ವಿಚಾರ ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರ ಬುದ್ಧಿ ಚಾಣಾಕ್ಷತನವನ್ನು ನಾನು ಮೆಚ್ಚಿಕೊಂಡಿದ್ದೇನೆ. ನೋಟಿಫಿಕೇಷನ್ನನ್ನು ಕೊಟ್ಟು ಕಳಿಸುತ್ತೇನೆ. Opposition Leader is entitled to it ಅವರಿಗೆ ಆಫೀಸ್ ಇದೆ, ಅಧಿಕಾರ ಇದೆ, ಪಡೆಯಬಹುದು. We will supply.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಹತ್ತಿರ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಹತ್ತಿರ ಇದೆ. ಬೇರೆಯವರಿಗೆ ಕಳಿಸಿಕೊಡುತ್ತೇನೆ.

ಡಾ|| ವಿ. ಎಸ್. ಆಚಾರ್ಯ — ಸನ್ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಒಂದು ವಿಚಾರವನ್ನು ತಿಳಿಸುತ್ತೇನೆ. ಆಮೇಲೆ ಎಲ್ಲಾ ಸದಸ್ಯರು ತಯಾರು ಇಲ್ಲದೇ ಹೋದರೆ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಪ್ರಮುಖವಾದ ವಿಚಾರವನ್ನು

ಎತ್ತಿದ್ದಾರೆ. ಈ ಬಿಲ್ಲಿನ ಸೆಕ್ಷನ್–3ಯಿಂದ ಸೆಕ್ಷನ್–5ವರೆಗೆ ಏನು ರಚನೆ ಮಾಡಿದ್ದಾರೆ ಅದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆದುದರಿಂದ ಎಲ್ಲಾ ಸದಸ್ಯರಿಗೆ ಸಂಪೂರ್ಣವಾದ ನೋಟಿಫಿಕೇಷನ್ ಮುಂತಾದ ಮಾಹಿತಿಗಳನ್ನು ಒದಗಿಸಿಕೊಡಬೇಕು. ಎಲ್ಲಾ ಮಾಹಿತಿಗಳನ್ನು ಅಭ್ಯಾಸ ಮಾಡಿ ಮಾತನಾಡುವುದು ಒಳ್ಳೆಯ ಕ್ರಮ. ನಾನು ಪ್ರಥಮವಾಗಿ ಮಾತನಾಡಬೇಕು ಎಂದು ಇದ್ದೇನೆ ಆದರೆ ನೋಟಿಫಿಕೇಷನ್ ಮುಂತಾದ ನಿಯಾಮವಳಿಗಳು ಬರಬೇಕಾಗಿದೆ. ಅವೆಲ್ಲಾ ಕೈಗೆ ಬಂದ ಮೇಲೆ ಮಾತನಾಡಬೇಕು ಎಂದು ಇದ್ದೇನೆ. ಆದುದರಿಂದ ದಯಮಾಡಿ ಇದರ ಬಗ್ಗೆ ಚರ್ಚೆಯನ್ನು ನಾಳೆಗೆ ನಿಗದಿ ಮಾಡಿ. ನಾಳೆ ಚರ್ಚೆ ಪ್ರಾರಂಭಿಸುವುದು ಒಳ್ಳೆಯದು ಎಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವನ್ನು ಹೇಳಬಯಸುತ್ತೇನೆ. ಏನೆಂದರೆ, ಮಾನ್ಯ ಮಂತ್ರಿಗಳಾದ ಸಿಂಧ್ಯರವರ ಸಮಿತಿ ಸರ್ಕಾರಕ್ಕೆ ವರದಿ ಕೊಟ್ಟಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ತಿಳಿದುಕೊಂಡಿದ್ದೇನೆ. ಆ ವರದಿಯನ್ನೂ ಕೂಡ ಸದನದಲ್ಲಿ ಮಂಡಿಸಿದರೆ ಒಳ್ಳೆಯದು. ಅದರ ಬಗ್ಗೆಯೂ ಕೂಡ ನಾವು ಚರ್ಚೆ ಮಾಡಬಹುದು. ಏಕೆಂದರೆ ರಾಜ್ಯದ ಹಿತದೃಷ್ಟಿಯಿಂದ ಅವರು ಬಹಳ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಒಳ್ಳೆಯ ವರದಿ ಎಂದು ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಎಸ್. ಬಂಗಾರಪ್ಪ.—ನಾನು ಅದರ ವಿಚಾರವನ್ನು ಪತ್ರಿಕೆಯಲ್ಲಿ ಓದಿದ್ದೇನೆ, ಆದ್ದರಿಂದ ತಿಳಿಯಿತು.

ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರೂ ಮಂತ್ರಿಮಂಡಲದ ಸದಸ್ಯರಾಗಿದ್ದರು ಮತ್ತು ಉಪ ಸಮಿತಿಯ ಅಧ್ಯಕ್ಷರಾಗಿದ್ದರು. ಹಿಂದೆ ಯಾವುದಾದರೂ ಉಪ ಸಮಿತಿಯ ವರದಿಯನ್ನು ಸದನದ ಮುಂದೆ ಇಟ್ಟಿದ್ದಾರೆಯೇ ?

ಶ್ರೀ ಎಸ್. ಬಂಗಾರಪ್ಪ —ಇದು ಉಪ ಸಮಿತಿಯ ವರದಿಯೇ

ಶ್ರೀ ಎಸ್ ಆರ್. ಬೊಮ್ಮಾಯಿ.—ಹೌದು.

ಶ್ರೀ ಕೆ. ಹೆಚ್. ರಂಗನಾಥ್.—ಆ ವರದಿಯನ್ನು ಸಭೆಯ ಮುಂದೆ ಇಡುವುದು ಬಿಡುವುದು ತಮಗೆ ಬಿಟ್ಟಿದ್ದು. ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಇದು ವಾದಗ್ರಸ್ತ ವಿಚಾರವಾಗಿದೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ನಾನು ಕಡಿಮೆ ಅವಧಿಯಲ್ಲಿ ಈ ಬಿಲ್ಲನ್ನು ನೋಡಿದೆ. ಇದು ಶ್ರೀಮಂತ ವರ್ಗಕ್ಕೆ ಬಹಳ ಅನುಕೂಲ ಮಾಡುವಂಥ ಬಿಲ್ಲ. ಇವತ್ತು ಮಾತನಾಡಲು ಇಷ್ಟವುಳ್ಳವರಿಗೆ ಇವತ್ತು ಮಾತನಾಡುವುದಕ್ಕೆ ಅವಕಾಶ ಕೊಡಿ, ಅಭ್ಯಾಸ ಮಾಡಿಕೊಂಡು ಬರುವವರಿಗೆ ನಾಳೆ ಅವಕಾಶಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯ ಪ್ರಸ್ತಾಪ ಮಾಡುವ ಹಾಗಿದ್ದರೆ ಮಾಡಲಿ.

ಶ್ರೀ ಎನ್. ಜಿ. ನಾಯಕ್.—ಈ ಬಿಲ್ಲಿನ ಬಗ್ಗೆ ನಾಳೆ ಚರ್ಚೆ ಮಾಡೋಣ. ಅಷ್ಟರಲ್ಲಿ ಪ್ರಪಂಚವೇನೂ ಮುಳುಗಿ ಹೋಗುವುದಿಲ್ಲ.

ಶ್ರೀ ಜಿ. ಡಿ. ಸೋಮಪ್ಪ.—ಮಾನ್ಯ ಬಂಗಾರಪ್ಪನವರು ಮಾನ್ಯ ಸಿಂಧ್ಯಾರವರ ಸಮಿತಿಯ ವರದಿಯನ್ನು ಸದನದ ಮುಂದಿಡಿ ಎಂದು ಹೇಳಿದರು. ಅದಕ್ಕೆ ಮಾನ್ಯ ಬೊಮ್ಮಾಯಿಯವರು ಹಿಂದೆ ತಾವೂ ಮಂತ್ರಿ ಮಂಡಲದಲ್ಲಿದ್ದಿರಿ, ಈ ರೀತಿ ಉಪ ಸಮಿತಿಯ ವರದಿಯನ್ನು ಹಿಂದೆ ಸದನದ ಮುಂದೆ ಇಟ್ಟಿದ್ದೀರಾ ಎಂದು ಹೇಳಿದರು. ನಾನು ಹೇಳುವುದೇನೆಂದರೆ ಮಾನ್ಯ ಬೊಮ್ಮಾಯಿಯವರು ಹಿಂದೆ ಈ ರೀತಿ ಉಪ ಸಮಿತಿಯ ವರದಿಯನ್ನು ಸದನದ ಮುಂದೆ ಇಡಿ ಎಂದು ಕೇಳಿರಲಿಲ್ಲ, ಆದ್ದರಿಂದ ಇಡಲಿಲ್ಲ. ಮಾನ್ಯ ಆರೋಗ್ಯ ಸಚಿವರು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆಂದು ಪತ್ರಿಕೆಯಲ್ಲೂ ಬಂದಿದೆ. ಅದನ್ನು ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ. ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಇಂತಹ ವಿಚಾರಗಳು ಬರುತ್ತವೆ. ಈ ಸರ್ಕಾರದ ಬಗ್ಗೆ ಪತ್ರಿಕೆಯವರು ಈ ರೀತಿ ಹಾಕುತ್ತಾ ಇದ್ದಾರೆ, ಹಾಕಿಕೊಳ್ಳಲಿ. ಇದನ್ನು ಮಾನ್ಯ ಲಕ್ಷ್ಮೀಸಾಗರ್‌ವರು ಕೂಡ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸಿಂಧ್ಯಾರವರ ಸಮಿತಿ ವರದಿ ಏನಿದೆ. ಅದು ಅವರ ಆರೋಗ್ಯ ಖಾತೆಗೆ ಸೇರಿರತಕ್ಕದ್ದು ಮತ್ತು ಮೆಡಿಕಲ್ ಕಾಲೇಜುಗಳಿಗೆ ಸಂಬಂಧಪಟ್ಟಿದ್ದು. ಮಾನ್ಯ ಸಿಂಧ್ಯಾರವರು ಯುವಕರು, ತರುಣರು, ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದನ್ನೂ ಕೂಡ ಸದನದ ಸದಸ್ಯರಿಗೆ ಕೊಡಲಿ. ಏಕೆಂದರೆ, ಅದು ಎಷ್ಟೋ ಜನರ ಭವಿಷ್ಯವನ್ನು ನಿರ್ಧಾರಮಾಡತಕ್ಕ ವಿಷಯ. ಇದು ಸಾಮಾನ್ಯವಾದಂಥ ವಿಷಯವಲ್ಲ. ಆದ್ದರಿಂದ ಇದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಕೆಲಸಮಾಡಬೇಕಾಗಿದೆ. ಅಲ್ಲದೆ, ಹಿಂದಿನ ಸರ್ಕಾರದಲ್ಲಿ ಹಾಗೆ ಮಾಡಿದರು ಎಂದು ಹೇಳಿದರು. ಆದರೆ ಇವತ್ತಿನ ದಿವಸ ಮೆಡಿಕಲ್ ಕಾಲೇಜುಗಳು ಬೇರೆ ರಾಜ್ಯಗಳಿಗೆ ಮಾರಾಟಮಾಡತಕ್ಕ ವಸ್ತುವಾಗುತ್ತಿದೆ ಎಂಬ ಅಭಿಪ್ರಾಯ ಜನಗಳ ಮನಸ್ಸಿನಲ್ಲಿ ಬಂದಿದೆ.

ಶ್ರೀ ಆರ್. ಎಲ್ ಜಾಲಪ್ಪ.—ಮಾನ್ಯ ಸೋಮಪ್ಪನವರಿಗ ಈಗ ಜ್ಞಾನೋದಯವಾಗಿದೆ.

ಹೊರ ರಾಜ್ಯಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟರೆ ನಮ್ಮ ಹುಡುಗರ ಗತಿ ಏನಾಗಬೇಕು ? ಆದುದರಿಂದ ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಅದರ ಬಗ್ಗೆ ಚರ್ಚೆಯನ್ನು ನಾಳೆಗೆ ತೆಗೆದುಕೊಳ್ಳೋಣ, ತಾವು ಸಹ ದೊಡ್ಡ ಮನಸ್ಸು ಮಾಡಬೇಕು. ಮಾನ್ಯ ಸಿಂಧ್ಯಾರವರ ರಿಪೋರ್ಟನ್ನು ಕೊಡಲಿ ಎಲ್ಲರಿಗೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ ಅದರ ಕಾಪಿಯನ್ನು ನಮ್ಮ ವಿರೋಧ ಪಕ್ಷದ ನಾಯಕರಿಗೆ ಮತ್ತಿತರಿಗೆ ಕೊಟ್ಟು ನಾವು ಅದರ ಬಗ್ಗೆ ಸ್ಟಡಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಸಭಾಧ್ಯಕ್ಷರು.—ಚರ್ಚೆ ಇವತ್ತಿಗೇ ಮುಗಿಯುವುದಿಲ್ಲ ನಾಳೆಗೂ ಮುಂದುವರಿಯುತ್ತದೆ.

ಶ್ರೀ ಜಿ. ಡಿ. ಸೋಮಪ್ಪ.—ಇವತ್ತು ಎಲ್ಲಾ ಅಡ್ಮಿಷನ್ ಆಗಿದೆ, ವ್ಯಾಪಾರವೆಲ್ಲಾ ಮುಗಿದು ಹೋಗಿದೆ, ವ್ಯಾಪಾರವೆಲ್ಲಾ ಕುದಿರಿದೆ, ಇದು ಇನ್ನು ಮುಂದಿನ ವರ್ಷಕ್ಕೆ ಅನ್ವಯಿಸುವಂಥಾದ್ದು ಆದುದರಿಂದ ಇದರ ಬಗ್ಗೆ ಇಷ್ಟು ಆತುರ ಪಡಬೇಕಾದುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ನಮಗೆ ವ್ಯಾಪಾರವೇನೆಂಬುದು ಗೊತ್ತಿಲ್ಲ. ಹಿಂದೆ ನಿಮ್ಮ ಸರ್ಕಾರವೇ ಇತ್ತು ಆಗ ಏನು ಮಾಡುತ್ತಿದ್ದಿರಿ, ಆದುದರಿಂದ ವ್ಯಾಪಾರ ಕುದಿರಿಸುವುದು ಎಲ್ಲಾ ಅವರಿಗೇ ಗೊತ್ತಿದೆ ನಮಗೇನೂ ಗೊತ್ತಿಲ್ಲ. ಆದುದರಿಂದ ಆ ರೀತಿಯಾಗಿ ಸುಮ್ಮನೇ ಮಾತನಾಡಿದರೆ ಏನು ಪ್ರಯೋಜನ ?

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಶ್ರೀ ಮಹದೇವ್‌ರವರು ಮಾತನಾಡುವಾಗ ಮತ್ತಿತರ ವಿರೋಧ ಪಕ್ಷದ ಸದಸ್ಯರು ಅವರಿಗೆ ತಡೆ ಒಡ್ಡುತ್ತಿದ್ದಾರೆ, ಆದುದರಿಂದ ತಾವು ಅವರಿಗೆ ರಕ್ಷಣೆ ಕೊಟ್ಟು ಅವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎನ್. ಜಿ. ನಾಯಕ್.—ಇದು ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟ ಪ್ರಶ್ನೆ, ಇದು ಬಹಳ ಪ್ರಾಮುಖ್ಯವಾದುದು ಆದುದರಿಂದ ಇದರ ಬಗ್ಗೆ ಚರ್ಚೆಯನ್ನು ದಯವಿಟ್ಟು ನಾಳೆಗೆ ಮುಂದುವರಿಸುವುದ ಒಳ್ಳೆಯದು.

ಉಪಸಭಾಧ್ಯಕ್ಷರು.—ಮಾನ್ಯ ಸದಸ್ಯರು ಯಾರಾದರೂ ಈ ಬಿಲ್ಲಿನ ಬಗ್ಗೆ ಮಾತನಾಡಬಹುದು.

ಶ್ರೀ ಡಾ. ಎಂ. ಪಿ. ಕರ್ಕಿ.—ಇಲ್ಲಿ ಒಂದು ವಿಷಯ ಚರ್ಚೆಯಾದಾಗ ಅದು ಇತರ ಎಲ್ಲಾ ಸದಸ್ಯರಿಗೂ ಅರಿವು ಉಂಟಾಗುವ ಹಾಗಿರಬೇಕು. ಚರ್ಚೆಯ ವಿಷಯವೇ ಅರ್ಥವಾಗದಿದ್ದರೆ ನಾವು ಇಲ್ಲಿ ಸುಮ್ಮನೇ ಕೂತುಕೊಂಡು ಏನು ಪ್ರಯೋಜನ ? ಆದುದರಿಂದ ಇವತ್ತಿನ ದಿವಸ ಇಲ್ಲಿ ಚರ್ಚೆಯಾಗುವುದಕ್ಕಿಂತ ನಾಳೆಗೆ ಮುಂದುವರಿಸುವುದು ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ. ಡಾ. ಆಚಾರ್ಯರವರು ಹೇಳಿದ ಹಾಗೆ ಚರ್ಚೆಯಾಗುವಾಗ ಒಬ್ಬ ಸದಸ್ಯರು ಏನು ಮಾತನಾಡುತ್ತಿದ್ದಾರೆ ಎನ್ನುವ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ವಿಷಯ ತಿಳಿದುಕೊಳ್ಳದೇ ನಾವು ಇಲ್ಲಿ ಸುಮ್ಮನೆ ಕೈ ಎತ್ತುವುದಕ್ಕೆ ಬಂದಿಲ್ಲ. ಆದುದರಿಂದ ನಾವು ಈ ಬಿಲ್ಲನ್ನು ಸ್ಟಡಿ ಮಾಡಿ ನಾಳೆ ಚರ್ಚೆ ಮಾಡುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಿ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಾ. ವಿ. ಎಸ್. ಆಚಾರ್ಯ.—ಬಹುತೇಕ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಇಲ್ಲಿ ನೋಟಿಫಿಕೇಷನ್ ಕೊಡದೇ ಇರುವುದರಿಂದ ಚರ್ಚೆಯನ್ನು ಡಾ. ಕರ್ಕಿಯವರು ಹೇಳಿದ ಹಾಗೆ ನಾಳೆಗೆ ಹಾಕುವುದು ಒಳ್ಳೆಯದು.

ಶ್ರೀ ಎಂ. ಮಹದೇವ್.—ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧರಾಗಿ ಏನೋ ಇದ್ದೇವೆ ಆದರೆ ಮುಖ್ಯಮಂತ್ರಿಗಳವರು ಮತ್ತು ವಿದ್ಯಾಮಂತ್ರಿಗಳವರು ಇಲ್ಲದೇ ಇರುವುದರಿಂದ ನಾಳೆಗೆ ಇದನ್ನು ಮುಂದಕ್ಕೆ ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಒಂದೊಂದು ನಿಮಿಷಕ್ಕೂ ನಾವು ಬಡ ಬೋರೇಗೌಡನ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಈ ವಿಚಾರದ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಸಿದ್ಧರಾಗಿದ್ದಾರೆ ಅಂಥವರು ಇವತ್ತು ಭಾಗವಹಿಸಲಿ, ಹಾಗೂ ತಾವು ಅದೇ ರೀತಿ ಅಪ್ಪಣೆ ಕೊಡಿಸಿದ್ದೀರಿ, ನಾಳೆಗೂ ಚರ್ಚೆ ಮುಂದುವರಿಯುತ್ತದೆ. ಮಾನ್ಯ ಕರ್ಕಿಯವರು ಹೇಳಿದ ಹಾಗೆ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ ಇಲ್ಲವೆಂದು ಅಲ್ಲ, ಆದರೆ ಯಾರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಿದ್ಧರಾಗಿದ್ದಾರೆ ಅಂಥವರು ಮಾತನಾಡಲಿ ಮಿಕ್ಕವರು ನಾಳೆ ಭಾಗವಹಿಸಬಹುದು. ಇನ್ನು ಮುಖ್ಯ ಮಂತ್ರಿಗಳವರು ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಮುಖ್ಯ ಮಂತ್ರಿಗಳವರು ಮೇಲ್ಮನೆಯಲ್ಲಿದ್ದಾರೆ. ಇನ್ನು ವಿದ್ಯಾ ಮಂತ್ರಿಗಳವರಿಗೆ ಮೈಯಲ್ಲಿ ಹುಷಾರಿಲ್ಲ. ಆದರೆ ಇದಕ್ಕೆ ಸಂಬಂಧ ಪಟ್ಟ ಹಾಗೆ ಆರೋಗ್ಯಮಂತ್ರಿಗಳೇ ಇರುವುದರಿಂದ ತಾವು ಸಹ ಅಪ್ಪಣೆ ಕೊಡಿಸಿರುವುದರಿಂದ ಚರ್ಚೆ ಮುಂದುವರಿಯಲಿ, ಈಗ ಮಧ್ಯದಲ್ಲಿ ನಿಲ್ಲಿಸುವುದಕ್ಕೆ ಬರುವುದಿಲ್ಲವೆಂದು ಹೇಳಬಯಸುತ್ತೇನೆ.

ಉಪಸಭಾಧ್ಯಕ್ಷರು.—ಇವತ್ತು ಚರ್ಚೆ ಪ್ರಾರಂಭವಾಗುತ್ತಿದೆ. ಆದುದರಿಂದ ಯಾರಾದರೂ ಭಾಗವಹಿಸುವವರು ಇದ್ದರೆ ಪ್ರಾರಂಭಿಸಿ, ಇದು ನಾಳೆಗೂ ಮುಂದುವರಿಯುತ್ತದೆ.

ಡಾ|| ವಿ. ಎಸ್. ಆಚಾರ್ಯ.—ಅಧ್ಯಕ್ಷರೇ, ನಾನು ಭಾಷಣ ಮಾಡುವುದಕ್ಕೆ ಎಲ್ಲ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಹೇಳುತ್ತಿದ್ದೇನೆ. ಸೆಕ್ಷನ್ 15ರಲ್ಲಿ ವ್ಯಾಲಿಡೇಷನ್ ಎಂದು ಇದೆ ಅದನ್ನು ಓದುತ್ತೇನೆ. ಏತಕ್ಕೆಂದರೆ ಅದು ರಿಲೆವೆನ್ಸ್ ಆಗುತ್ತದೆ,

"Not with standing anything contained in this Act; any rule or orders made or issued (including Government Order No. HFW 44 MSF 83 dated 28 th June, 1983 and Government Order No. ED 37 TEC 83 dated 7th July, 1983) before the date of its commencement, in respect of or in relation to any of the matters for the furtherance of which this Act is enacted shall be deemed to be as valid and effective..........."

ಒಂದೆರಡು ನೋಟಿಫಿಕೇಷನ್ ಇದರಲ್ಲಿ ಕೊಟ್ಟಿಲ್ಲ ಆದುದರಿಂದ ಮಾನ್ಯ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಗೆಜೆಟ್‌ನಲ್ಲಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳವರು ಗೆಜೆಟ್‌ನಲ್ಲಿ ಬಂದಿತ್ತೆಂದು ಹೇಳುತ್ತಾರೆ. ಅದನ್ನು ನಾವು ಹುಡುಕಿಕೊಂಡು ಹೋಗುವುದಕ್ಕೆ ಆಗುತ್ತದೆಯೇನು ? ಆದುದರಿಂದ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಡಾ|| ಆಚಾರ್‌ರವರು ಹೇಳಿದ ಹಾಗೆ ನೋಟೀಫಿಕೇಷನ್‌ನಲ್ಲಿ ಏನಿದೆ ಎಂಬುದನ್ನಾದರೂ ನೋಡುವುದಕ್ಕೆ ಸಮಯ ಬೇಡವೇ ? ಅದುದರಿಂದ ಮಾನ್ಯ ಉಪಾಧ್ಯಕ್ಷರು ನಾವು ಹೇಳುವ ವಿಷಯವನ್ನು ಅರ್ಥ ಮಾಡಿಕೊಂಡರು ಎಂದು ಕಾಣುತ್ತದೆ. ಗೆಜೆಟ್‌ನಲ್ಲಿ ಬಂದಿದೆ, ಆದರೆ ಇವತ್ತು ನೀವು ಬಿಲ್ಲನ್ನು ತಂದು ಚರ್ಚೆಗೆ ಇಡುತ್ತಿದ್ದೀರಿ ಆದುದರಿಂದ ಆ ನೋಟೀಫಿಕೇಷನ್ ಗಳನ್ನು ಕೊಟ್ಟಮೇಲೆ ಇದರ ಬಗ್ಗೆ ಪ್ರಸ್ತಾಪ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಆದ್ದರಿಂದ ಚರ್ಚೆ ಪ್ರಾರಂಭ ಮಾಡುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ಬಿಲ್ಲನ್ನು ಮೊದಲೇ ಸರ್ಕ್ಯುಲೇಟ್ ಮಾಡಬೇಕು. ಕಾಲದ ಬಗ್ಗೆ ಬಹಳ ವ್ಯಾಖ್ಯಾನ ಮಾಡಿದಿರಿ, ಒಪ್ಪೋಣ. ಆದ್ದರಿಂದ ಇವತ್ತು ಬೇರೆ ಯಾವುದಾದರೂ ಚರ್ಚೆಯನ್ನು ತೆಗೆದುಕೊಳ್ಳಿ ; ನಾಳೆ ಇದನ್ನು ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆರ್ಡಿನೆನ್ಸ್ ಈ ಮೊದಲೇ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ಇದು ಎಲ್ಲ ಸದಸ್ಯರಿಗೂ ಗೊತ್ತಿದೆ. ಆರ್ಡಿನೆನ್ಸ್ ಬಂದು ಈಗಾಗಲೇ ಒಂದು ತಿಂಗಳಾಗಿದೆ. ಇದರ ಜೊತೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಂದೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿದೆ. ನಾನು ಟೀಕೆ ಮಾಡುವ ದೃಷ್ಟಿಯಿಂದ ಹೇಳುವುದಿಲ್ಲ, ಸದಸ್ಯರಿಗೆ ಆಸ್ತೆ ಇದ್ದರೆ ಆರ್ಡಿನೆನ್ಸ್ ಅಭ್ಯಾಸ ಮಾಡಿರುತ್ತಾರೆ. ಅದರ ಲೋಪ ದೋಷಗಳನ್ನು ನೋಡಿರುತ್ತಾರೆ, ವಿಷಯ ಅಜೆಂಡಾದಲ್ಲಿ ಬಂದ ಮೇಲೆ ಚರ್ಚೆಗೆ ಬರುವಾಗ ಹಿಂದಿನ ಆಜ್ಞೆಗಳನ್ನು, ಗೆಜೆಟ್ಟನ್ನು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾದಂತಹ ವಿಚಾರಗಳನ್ನು ತೆಗೆದುಕೊಂಡು ಬರುತ್ತಾರೆ. ಆ ದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ನೋಟಿಫಿಕೇಷನ್‌ಅನ್ನು ತಂದಿದ್ದಾರೆ. ಇದು ಕೇವಲ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡತಕ್ಕ ಮಸೂದೆ.

ಶ್ರೀ ಎಸ್. ಬಂಗಾರಪ್ಪ.—ಏನೇ ಆಗಲಿ. ನಾವು ಬೆಳಿಗ್ಗೆ 11 ಗಂಟೆಯಿಂದ ಇಲ್ಲಿ ಕುಳಿತಿದ್ದೇವೆ. ನಾವು ಇಲ್ಲಿಗೆ ಬಂದ ಮೇಲೆ ವಿಷಯ ಗೊತ್ತಾಗಿರುವುದರಿಂದ ಈಗ ನೋಟಿಫಿಕೇಷನ್ ನೋಡಿ ಪ್ರಸ್ತಾಪ ಮಾಡುವುದಕ್ಕೆ ಯಾರಿಗೆ ತಾನೇ ಸಾಧ್ಯವಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಎಲ್ಲ ಪಕ್ಷದ ನಾಯಕರೂ ಇರುತ್ತಾರೆ. ಅವರಿಗೆ ವಿಷಯ ಪ್ರಸ್ತಾಪವಾಗುವುದು ಗೊತ್ತಾಗುತ್ತದೆ. ಅದನ್ನು ಅವರು ತಮ್ಮ ತಮ್ಮ ಪಕ್ಷದ ಸದಸ್ಯರಿಗೆ ಸಾಮಾನ್ಯವಾಗಿ ತಿಳಿಸುವುದಕ್ಕೆ ಬರುತ್ತದೆ. ಯಾರ್ಯಾರು ಮಾತನಾಡುತ್ತೀರಿ ಎಂದು ಕೇಳಿ ಅದಕ್ಕೆ ಸಿದ್ಧತೆ ಮಾಡಿಕೊಳ್ಳಿ ಎಂದು ಹೇಳತಕ್ಕದ್ದು ಪ್ರಜಾಪ್ರಭುತ್ವದ ಪದ್ಧತಿಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಪಕ್ಷೇತರರಿಗೆ ಹೇಳುವವರು ಯಾರು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲರ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಸರ್ವೇ ಸಾಮಾನ್ಯವಾಗಿರತಕ್ಕದ್ದನ್ನು ಹೇಳುತ್ತಿದ್ದೇನೆ. ಇನ್ನೂ ಒಂದು ಗಂಟೆ ಕಾಲಾವಕಾಶ ಇರುವುದರಿಂದ ಚರ್ಚೆಯನ್ನು ಪ್ರಾರಂಭ ಮಾಡೋಣ ; ಮತ್ತು ನಾಳೆಗೆ ಮುಂದುವರಿಸೋಣ. ಚರ್ಚೆ ಪ್ರಾರಂಭವಾದ ಮೇಲೆ ನಿಲ್ಲಿಸುವುದಕ್ಕಾಗುವುದಿಲ್ಲ ಮತ್ತು ಮಧ್ಯದಲ್ಲಿ ಮತ್ತೊಂದು ಮಸೂದೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Sri A. LAKSHMISAGAR.—The Ordinance was published in the Karnataka Gazette dated July 11, 1983 i.e., exactly a month

ago it was published in the official gazette and copies of the gazette are sent to all the members of this House This is only an ordinance replacing Bill and no new clause or no new idea is introduced in the ordinance replacing Bill. It is an exact replica of the ordinance.

Sri Y. RAMAKRISHNA.—Then what about the two notifications stated in the Bill ?

Sri A. LAKSHMISAGAR.—Notifications are there for validation purpose All that I am trying to tell this hon'ble House is, discussion has started and let us continue We are not in a hurry to get this Bill passed today itself.

Sri Y. RAMAKRISHNA.—But how can you proceed without the two notifications mentioned here ?

SRI A. LAKSHMISAGAR.—That is also a s subject matter of gazette notification ....

ಶ್ರೀ ಎಸ್. ಬಂಗಾರಪ್ಪ.—ಒಂದು ನೋಟಿಫಿಕೇಷನ್ ಇಶ್ಯೂ ಮಾಡತಕ್ಕ ಅಧಿಕಾರನ್ನು ಒಬ್ಬ ಅಧಿಕಾರಿಗೆ ಒಂದು ಕ್ಲಾಸ್ ಹಾಕಿ ಸರ್ಕಾರ ಕೊಡುತ್ತದೆ. ಆದರೆ ಏನು ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆಂಬುದು ನಿಮ್ಮ ಈ ಬಿಲ್ಲಿನಲ್ಲಿ ಬರುವುದಿಲ್ಲ. ಈ ಅಂಶವನ್ನು ತಾವು ತಿಳಿದುಕೊಳ್ಳಬೇಕು.

Sri A. LAKSHMISAGAR.—You kindly see the Ordinance. All that I am trying to say is, it is not that sufficient material has not been brought into the Bill.

ಶ್ರೀ ವೈ. ರಾಮಕೃಷ್ಣ.—ಹಾಗೆ ಯಾರು ಹೇಳಿದರು ? ಪ್ರತಿಗಳನ್ನು ಕೊಡಿ ಎಂದು ಕೇಳುತ್ತಿದ್ದೇವೆ.

Sri A. LAKSHMISAGAR.—It is there in the Ordinance itself. There was one month's time. All that I am trying to plead with the hon. members is that it is an ordinance replacing bill and not even a coma or full-stop is changed

Sri S. BANGARAPPA.—I would like to know is this a Bill which is going to replace the notifications? ರೀಪ್ಲೇಸ್ ಮಾಡುವುದಕ್ಕೆ ಬರುತ್ತದೆಯೇ ? ಬಂದರೆ, ಯಾವುದರಲ್ಲಿ ಬರುತ್ತದೆ ?

Sri A LAKSHMISAGAR.—What has to be deleted is mentioned in the Ordinance itself and the notification issued finds a place in the gazette.

ಶ್ರೀ ಎಸ್. ಬಂಗಾರಪ್ಪ.—ನೋಟಿಫಿಕೇಷನ್‌ನಲ್ಲಿ ಬಂದಿರತಕ್ಕದ್ದನ್ನು ಬಿಲ್ಲಿನಲ್ಲಿ ತರುವುದಕ್ಕಾಗುವುದಿಲ್ಲ. ಹಿಂದಿನ ಕಾನೂನು ಮಂತ್ರಿಗಳಿದ್ದಾರೆ ಮತ್ತು ತಾವೂ ಈಗ ಕಾನೂನು ಮಂತ್ರಿಗಳಾಗಿದ್ದೀರಿ. ಇದನ್ನು ತಾವು ವಿಚಾರ ಮಾಡಬೇಕು. ನೋಟಿಫಿಕೇಷನ್‌ನಲ್ಲಿರುವ ವಿವರಗಳನ್ನು ಬಿಲ್ಲಿನಲ್ಲಿ ತರುವುದಕ್ಕಾಗುವುದಿಲ್ಲ. ಮತ್ತು ಈ ಬಿಲ್ಲಿನಿಂದ ಅದನ್ನು ರೀಪ್ಲೇಸ್ ಮಾಡುವುದಕ್ಕೆ ಬರುವುದಿಲ್ಲ. ಹೀಗೆ, ಇವೆಲ್ಲ ಬಹಳ ಸಮಸ್ಯೆಗಳು ಇವೆ. ಆದ್ದರಿಂದ, ನಾನು ಹೇಳತಕ್ಕದ್ದೇನೆಂದರೆ, ನೋಟಿಫಿಕೇಷನ್ ಅನ್ನು ರೀಪ್ಲೇಸ್ ಮಾಡತಕ್ಕ ಬಿಲ್ ಇದಲ್ಲ; ಆರ್ಡಿನೆನ್ಸನ್ನು ರೀಪ್ಲೇಸ್ ಮಾಡತಕ್ಕ ಬಿಲ್ ಅಷ್ಟೆ ಇದು. ಅದಕ್ಕೋಸ್ಕರ ನಮ್ಮ ಮುಂದಿಟ್ಟಿರತಕ್ಕ ಬಿಲ್ ಗೆಜೆಟ್‌ನಲ್ಲಿ ನೋಟಿಫೈ ಆಗಿದೆ. ಆದರೆ ನಮಗೆ ಕಳುಹಿಸಿ ಕೊಟ್ಟಿರತಕ್ಕ ಈ ಬಿಲ್ಲನ್ನು ನಾವು ಇಂದು ಬೆಳಿಗ್ಗೆ 11 ಗಂಟೆಗೆ ಈ ಸದನದಲ್ಲಿ ನೋಡಿದ್ದೇವೆ. ಡಾ. ಆಚಾರ್ಯ ಅವರು ಪ್ರಸ್ತಾಪ ಮಾಡಿದ ಹಾಗೆ 15ನೇ ಕಲಂ ಏನಿದೆ ಅದು ಬಹಳ ಮುಖ್ಯವಾದದ್ದು. ಈಗ ಸದನದಲ್ಲಿ ಭಾಗವಹಿಸಿರತಕ್ಕ ಸದಸ್ಯರು ಗೆಜೆಟ್ ನೋಡಿ ಮಾತನಾಡುವುದಕ್ಕೆ ಆಗುತ್ತದೆಯೆ? ಡಾಕ್ಟರು ಕೂಡ ಇದನ್ನು ನೋಡಿ ಭಾಷಣ ಮಾಡುವುದನ್ನು ನಿಲ್ಲಿಸಿದರು.

ಉಪಸಭಾಧ್ಯಕ್ಷರು.—ಅವರು ಭಾಷಣ ಮಾಡುವುದಕ್ಕೆ ಸಿದ್ಧರಾಗಿದ್ದರು

ಶ್ರೀ ಎಸ್. ಬಂಗಾರಪ್ಪ.—ಅದು ನನಗೆ ಗೊತ್ತಿದೆ. ಆದರೆ ವಿವರಗಳನ್ನು ನೋಡಿದ ಮೇಲೆ ಭಾಷಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ತೀರ್ಮಾನಕ್ಕೆ ಡಾಕ್ಟರೇ ಬಂದಿದ್ದಾರೆ ಅಂದ ಮೇಲೆ ಉಳಿದವರ ಪಾಡೇನು ? (ಪೇಷೆಂಟ್‌ಗಳ ಗತಿ ಏನು ?) ಆದ್ದರಿಂದ ಇದನ್ನು ನಾಳೆ ಚರ್ಚೆಗೆ ತೆಗೆದು ಕೊಳ್ಳೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ಒಂದು ಗಂಟೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವೇನು ಸಮಯವನ್ನು ಮುಂದೆ ಹಾಕಬೇಕೆಂಬ ಉದ್ದೇಶ ದಿಂದ ಮಾತನಾಡುತ್ತಿಲ್ಲ. ಇಲ್ಲಿ ಅನೇಕ ಪ್ರಶ್ನೆಗಳು ಉದ್ಭವವಾಗುತ್ತವೆ. ಡಾ. ಆಚಾರ್ಯ ಅವರು ಹೇಳಿದ ಹಾಗೆ ಕ್ಲಾಜ್ 15ರದ್ದು ಬಹಳ ಪ್ರಾಮುಖ್ಯವಾದ ವಿಚಾರ. The notifications were issued presupposing this ordinance. The ordinance was issued on 11-7-1983. Notification was issued on 20th June 1983.

Sri A. LAKSHMISAGAR.—It was published in the official gazette.

Sri M. VEERAPPA MOILY.—It is a question of property. ಹಾಗೆ ಎಕ್ಸಿಕ್ಯೂಟೀವ್ ಆರ್ಡರ್ ಇಶ್ಯೂ ಮಾಡಿದ ಬಗ್ಗೆ ಬೊಮ್ಮಾಯಿಯವರು ಹೇಳಿದರು. ಹಿಂದಿನ ಸರ್ಕಾರ ಬೇಕೆಂದು ಮಾಡಿದ್ದರೆ ಅದು ಹೈಕೋರ್ಟಿನಿಂದ ತೀರ್ಮಾನವಾಗಿ ಬರುವವರಿಗೆ ಕಾಯಬೇಕಾ ಗಿತ್ತು. The provisions have been made in the ordiance or in the enactments after issue of certain rules or notifications. Such notifications have been issued earlier to the issue of ordinance. Then where is the propriety? It is only the legal propriety. There is also moral propriety. ಈ ಸರ್ಕಾರ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಒಂದು ನೀತಿಯನ್ನು ತಾಳಿ ನಂತರ ಈ ಕಾನೂನನ್ನು ಮಾಡುವ ವಿಚಾರ ಏನಿದೆ it is a propriety which we will question in detail. ಹಿಂದಿನ ಸರ್ಕಾರ ಎಗ್ಸಿಕ್ಯುಟೀವ್ ಆರ್ಡರ್ ಇಷ್ಯೂ ಮಾಡಿ ನಂತರ ಹೈಕೋರ್ಟಿಗೆ ಕಳುಹಿಸಿದೆ ಎಂದು ಏನು ವಾದ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ತಪ್ಪನ್ನು ತಾವು ಮಾಡಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದಿನ ನೆನಪು ಬರುತ್ತಿರಬೇಕುತಮಗೆ. ನೀವು ಏನೇನು ಮಾಡಿದ್ದೀರಿ ಎಂಬುದೆಲ್ಲಾ ನಮ್ಮ ಹತ್ತಿರ ಇದೆ. ಅದನ್ನು ಹೇಳುವುದು ಬೇಡ. ಲೈಸೆನ್ಸ್ ಅಲ್ಲ ಅದಕ್ಕೇನಾದರೂ ಬೇರೆ ಶಬ್ದ ಉಪಯೋಗಿಸಬೇಕಾಗುತ್ತದೆ. ಎಲ್ಲಾ ಆಕ್ಷನ್ ಮಾಡಿಬಿಟ್ಟಿರಿ ನೀವು.

ಶ್ರೀ ಎಂ. ವೀರಪ್ಪಮೊಯ್ಲಿ.—ಕರ್ನಾಟಕದ ಜನರನ್ನು ನೀವು ಮಾರಿಬಿಟ್ಟಿದ್ದೀರಿ. ಕನ್ನಡಿಗರ ವಿಚಾರವನ್ನು ಮುಂದೆ ಮಾಡಿಕೊಂಡು ಕನ್ನಡಿಗರಿಗೆ ಚೂರಿ ಹಾಕುತ್ತಿದ್ದೀರಿ. ಕನ್ನಡಿಗರ ಮಾನ, ಆಸ್ತಿ ಎಲ್ಲವನ್ನೂ ಹರಾಜು ಮಾಡುತ್ತಿದ್ದೀರಿ.

ಶ್ರೀ ಜೆ. ಡಿ. ಸೋಮಪ್ಪ.—ಸಿಂಧ್ಯ ಅವರ ರಿಪೋರ್ಟನ್ನು ಇಂಪ್ಲಿಮೇಟ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟು ಉದ್ರೇಕ ಗೊಂಡು ಮಾತನಾಡುವುದು ತಪ್ಪು. ಮಾನ್ಯ ಮೊಯಿಲಿಯವರು ಮಾತನಾಡಿದ್ದನ್ನು ಕೇಳಿದರೆ "devil quoting the bible" ಎಂಬಂತಾಗುತ್ತದೆ. ಭೂತ ಗೀತೋಪದೇಶ ಮಾಡುವುದನ್ನು ನಾವು ಬಲ್ಲೆವು. ಈ ಭೂತದ ಗೀತೋಪದೇಶ............

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಮಾತನ್ನು ಪಿಶಾಚಿಗಳ ಬಾಯಿಯಿಂದ ನಾವು ಕೇಳಬೇಕಾಗಿಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ನೀವು ಈ ರಾಜ್ಯವನ್ನು ಹರಾಜು ಮಾಡಿದ್ದನ್ನು ಮುಂದೆ ಇಡುತ್ತೇವೆ ತಾಳ್ಮೆಯಿಂದಿರಿ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ............

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮಿಂದ ಬುದ್ಧಿ ಕಲಿಯಬೇಕೆ? ನಿಮ್ಮನ್ನು ನೋಡಿ ರಾಜ್ಯದ ಜನ ನಗುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ನಾಟಕ ಎಲ್ಲರಿಗೂ ಗೊತ್ತು. ನಿಮ್ಮ ಚರಿತ್ರೆಯನ್ನು ಕನ್ನಡಿಗರು ಹೇಳುತ್ತಿದ್ದಾರೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಸಿಂಧ್ಯ ಅವರ ವರದಿಯನ್ನು ಸರ್ಕಾರ ಏತಕ್ಕೆ ಒಪ್ಪಿಕೊಳ್ಳಲಿಲ್ಲ ಎಂಬ ಬಗ್ಗೆ ಸ್ಪಷ್ಟೀಕರಣ ಇಲ್ಲ. ಅದು ಏತಕ್ಕೆ ಬದಲಾವಣೆಯಾಯಿತು ಎಂಬುದು ಅರ್ಥವಾಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳುವಾಗ ಹೇಳುತ್ತೇವೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಗಹನವಾದುದು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈ ವಿಷಯ ಪ್ರಥಮ ಬಾರಿಗೆ ಸದನದ ಮುಂದೆ ಬಂದಿದೆ ಎಂಬುದು ಸುಳ್ಳು. ಕ್ಯಾಪಿಟೇಷನ್ ಶುಲ್ಕದ ವಿಚಾರವಾಗಿ ಅನೇಕ ವರ್ಷಗಳಿಂದ ಸಾರ್ವಜನಿಕವಾಗಿ ಚರ್ಚೆ ನಡೆಯುತ್ತಿದೆ. ನಾವು ನಮ್ಮ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಹೇಳಿರುವುದು ನಿಜ. ಮಾನ್ಯ ಮುಖ್ಯ ಮಂತ್ರಿಗಳು ಬಹಿರಂಗವಾಗಿ ಈ ಕ್ಯಾಪಿಟೇಷನ್

ಶುಲ್ಕವನ್ನು 6 ತಿಂಗಳೊಳಗಾಗಿ.......

ಡಾ|| ಎಂ. ಪಿ. ಕರ್ಕಿ.—ಮಾನ್ಯ ಉಪಸಭಾಧ್ಯಕ್ಷರೇ ... .

ಉಪಸಭಾಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಕುಳಿತು ಕೊಳ್ಳಿ.

ಡಾ|| ಕರ್ಕಿ.—ನಾವು ಹೇಳುವುದನ್ನು ಕೇಳುವ ಮೊದಲೇ ಚರ್ಚೆ ಪ್ರಾರಂಭ ಮಾಡುವುದಾದರೆ ಅದು ನಿಮ್ಮ ಇಚ್ಛೆ. ನಾನು ಹೇಳುವುದನ್ನು ಮಹೇಶ್ವರಪ್ಪನವರು ಕೇಳಬೇಕು.

ಉಪಾಸಭಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು. ನಾನು ಮಹೇಶ್ವರಪ್ಪನವರಿಗೆ ಮಾತನಾಡಲು ಹೇಳಿದ್ದೇನೆ.

ಶ್ರೀ ಹೆಚ್. ಗಂಗಾಧರನ್.—ಅವರು ಮಸೂದೆ ಬಗ್ಗೆ ಮಾತನಾಡುತ್ತಾರೋ ಅಥವಾ ಬೇರೆ ಮಾತನಾಡುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರು ಈ ರೀತಿ ಕಟ್ಟಪ್ಪಣೆ ಕೊಟ್ಟರೆ ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ. ನೋಟಿಫಿಕೇಷನ್ ಮಸೂದೆಯ ಒಂದು ಭಾಗ. ಅದು ನಮಗೆ ಬೇಕು.

(ಶ್ರೀ ಪಿ. ರಾಮದೇವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು.)

ಡಾ|| ಎಂ. ಪಿ. ಕರ್ಕಿ.—ಯಾರು ಸಭೆಯಲ್ಲಿ ಮಾತನಾಡುತ್ತಾರೋ ಅವರು ಮಾತ್ರ ಚರ್ಚೆಯಲ್ಲಿ ಪಾರ್ಟಿಸಿಪೇಟ್ ಮಾಡಿದಂತಾಗುವುದಿಲ್ಲ. ಯಾರು ಕೇಳುತ್ತಾರೋ ಅವರು ಅದರಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ. ಕೇಳುವವರಿಗೆ ಏನು ಮಾತನಾಡುತ್ತಾರೆ ಎಂಬುದು ಅರ್ಥವಾಗಬೇಕು. ಯಾವ ಕಲಂ ಪ್ರಕಾರ ಅವರು ಮಾತನಾಡುತ್ತಾರೆ, ಅದರಲ್ಲಿ ಏನೇನಿದೆ ಎಂಬುದನ್ನು ನೋಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಏನು ಮಾತನಾಡುತ್ತಾರೆ ಎಂಬ ಕಲ್ಪನೆ ಕೇಳುವವರಿಗೆ ಇರುವುದಿಲ್ಲ.

ಛೇರ್ಮನ್.—ತವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಪಿ. ಕರ್ಕಿ.—ಚರ್ಚೆಯಲ್ಲಿ ಭಾಗವಹಿಸುವುದೆಂದರೆ ಮಾತನಾಡುವವರು ಮತ್ತು ಕೇಳು ವವರು ಇಬ್ಬರೂ ಸೇರಿರುತ್ತಾರೆ. ಹೇಳುವವರು ಏನು ಹೇಳುತ್ತಾರೆ ಎಂಬ ಜ್ಞಾನ ಕೇಳುವವರಿಗೆ ಇಲ್ಲದಿದ್ದಾಗ ಅವರು ಹೇಳುವುದೇನೂ ಗೊತ್ತಾಗುವುದಿಲ್ಲ. ಆಗ ನಾವು ಸಭೆಯಲ್ಲಿದ್ದರೂ ಕೂಡ ಚರ್ಚೆ ಯಲ್ಲಿ ಭಾಗವಹಿಸಿದಂತಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಅವರು ಮಾತನಾಡುವುದಕ್ಕೆ ಅವ ಕಾಶ ಕೊಡಬಾರದು. ಈ ಮಸೂದೆ ನಮಗೆ ಬೆಳಗ್ಗೆ ಸಿಕ್ಕಿದೆ. ಇದರ ಬಗ್ಗೆ ಅಭ್ಯಾಸ ಮಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು. ಇಷ್ಟೆಲ್ಲಾ ಕೇಳಿಕೊಂಡರೂ ಕೂಡ ಈಗಲೇ ಚರ್ಚೆ ಮಾಡಬೇಕು ಎಂದು ಏತಕ್ಕೆ ಒತ್ತಾಯ ಮಾಡುತ್ತಿದ್ದರೋ ನಮಗೆ ಅರ್ಥವಾಗುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ಇಚ್ಛೆ ನಮಗಿದೆ. ಆದರೆ ಮಸೂದೆಯಲ್ಲಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದನ್ನು ನಾವು ಓದಬೇಕಾಗುತ್ತದೆ. ಇಲ್ಲದೆ ಹೋದರೆ ಪಾರ್ಟಿಸಿಪೇ ಷನ್ ಪೂರ್ತಿಯಾಗುವುದಿಲ್ಲ. ಆದ್ದರಿಂದ ಎಲ್ಲರಿಗೂ ಪಾರ್ಟಿಸಿಪೇಟ್ ಮಾಡುವುದಕ್ಕೆ ಅನುಕೂಲ ವಾಗುವಂತೆ ಈ ಮಸೂದೆ ಮೇಲಿನ ಚರ್ಚೆಯನ್ನು ನಾಳೆಗೆ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್.—ವಿಧೇಯಕ ಮಂಡಿಸಲ್ಪಟ್ಟಿದೆ. ನಾಳೆಯೂ ಚರ್ಚೆಗೆ ಅವಕಾಶ ಇದೆ. ಮಾನ್ಯ ಸದಸ್ಯರಾದ ಮಹೇಶ್ವರಪ್ಪನವರು ಭಾಷಣಕ್ಕೆ ತಯಾರು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಅವರು ಮಾತನಾಡುತ್ತಾರೆ.

ಶ್ರೀ ಎ. ಮುನಿಯಪ್ಪ.—ಇದನ್ನು ನಾಳೆಗೆ ಹಾಕಿದರೆ ಏನಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಟಿಫಿಕೇಷನ್ ಪ್ರತಿಗಳು ಬಂದಿವೆ. ಅದನ್ನು ಸದಸ್ಯ ರಿಗೆ ಕೊಡುತ್ತಿದ್ದೇವೆ. ಅಷ್ಟರೊಳಗೆ ಮಹೇಶ್ವರಪ್ಪನವರು ಮಾತನಾಡಲಿ.

ಶ್ರೀ ಜಿ. ಡಿ. ಸೋಮಪ್ಪ.—ಮಾನ್ಯ ಮಹೇಶ್ವರಪ್ಪನವರು ಭಾಷಣ ಮಾಡಲು ತಯಾರಾಗಿ ಬಂದಿರಬಹುದು. ಆದರೆ ನಾವೂ ಕೂಡ ವಿಷಯ ತಿಳಿದುಕೊಳ್ಳಬೇಕಲ್ಲ. ಇದು ಬಹಳ ಮಹತ್ವವಾದ ವಿಚಾರ. ಅವರಷ್ಟಕ್ಕೇ ಅವರೇ ಹೇಳಿಕೊಳ್ಳುವುದಾದರೆ ಹೇಳಿಕೊಳ್ಳಲಿ. ನಾವು ಏತಕ್ಕಿರಬೇಕು ಇಲ್ಲಿ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ಪ್ರಪ್ರಥಮ ಬಾರಿಗೆ ಒಂದು ಸರ್ಕಾರ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವ ತತ್ವವನ್ನು ಒಪ್ಪಿಕೊಂಡಿರುವುದನ್ನು ಆ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರು.......

(ಗೊಂದಲ)

ಛೇರ್ಮನ್.—ಮಾತನಾಡುತ್ತಿರುವ ಸದಸ್ಯರು ಯೀಲ್ಡ್ ಆಗದೆಹೋದರೆ ಬೇರೆಯವರು ಮಾತ ನಾಡುವುದಕ್ಕಾಗುವುದಿಲ್ಲ.

ಶ್ರೀ ವಿ. ಎಸ್. ಆಚಾರ್.—ಈಗ ಸಾಕಷ್ಟು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನ ವ್ಯಕ್ತ ಮಾಡಿದ್ದಾರೆ. ಸನ್ಮಾನ್ಯ ಬೊಮ್ಮಾಯಿಯವರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆದ ತೀರ್ಮಾನದ

ಬಗ್ಗೆ ಹೇಳುತ್ತಿದ್ದರು. ಅಲ್ಲಿ ಒಪ್ಪಿದ್ದು ಹೌದು. ಆದರೆ ಈ ಮಸೂದೆಗೆ ಸಂಬಂಧಿಸಿದ ನೋಟಿಫಿಕೇಷನ್‌ಗಳನ್ನು ಜೊತೆಯಲ್ಲಿ ಇಡುವುದಿಲ್ಲ ಎಂಬ ಕುರುಹು ನಮಗಿರಲಿಲ್ಲ. ಈ ನೋಟಿಫಿಕೇಷನ್ ಪ್ರಕಾರವೇ ಕಾಲೇಜುಗಳಲ್ಲಿ ಅಡ್ಮಿಷನ್ಸ್ ಆಗುತ್ತಿವೆ. ಆದ್ದರಿಂದ ಇದರ ಬಗ್ಗೆ ಸರಿಯಾದ ಚರ್ಚೆ ಆಗಬೇಕು. ಈ ಮಸೂದೆಗೆ ಸಂಬಂಧಿಸಿದ ನೋಟಿಫಿಕೇಷನ್‌ಗಳು ಜೊತೆಯಲ್ಲಿ ಇರಬೇಕಾಗುತ್ತದೆ. ಅದು ನಮಗೆ ವಿಧಿಪೂರ್ವಕವಾಗಿ ಸಿಗುತ್ತದೆಂದು ಭಾವಿಸಿದ್ದೆವು. ಆದರೆ ಸಿಗಲಿಲ್ಲ. ಇಂಥ ಸಂದರ್ಭದಲ್ಲಿ ಚರ್ಚೆ ಪ್ರಾರಂಭಮಾಡುವುದು ಹೇರಿಕೆಯಾಗುತ್ತದೆ. ಈ ಚರ್ಚೆ ನಾಳೆಯೂ ನಡೆಯುತ್ತದೆಂಬ ಬಗ್ಗೆ ಮಾನ್ಯ ಅಧ್ಯಕ್ಷರು ಭರವಸೆ ಕೊಡುತ್ತಾರೆಯೆ ? ಸದಸ್ಯರು ಇಲ್ಲದಿದ್ದಾಗ ಇದನ್ನು ಪಾಸ್ ಮಾಡುವ ಪ್ರಶ್ನೆ ಇಲ್ಲವಲ್ಲ ?

ಛೇರ್ಮನ್.—ನಾಳೆಯೂ ಅವಕಾಶವಿದೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಸದಸ್ಯರೆಲ್ಲರಿಗೂ ನೋಟಿಫಿಕೇಷನ್‌ಗಳ ಪ್ರತಿ ಕೊಡಬೇಕು.

ಶ್ರೀ ಕೆ. ಮಲ್ಲಪ್ಪ—ವಿದ್ಯಾ ಸಂಸ್ಥೆಗಳು ವಸೂಲು ಮಾಡುವ ಪ್ರವೇಶ ಶುಲ್ಕದ ಬಗ್ಗೆ ಕೆಲವಾರು ತಿದ್ದುಪಡಿಗಳನ್ನು ನಮ್ಮ ಸರ್ಕಾರ ಮಾಡಿದೆ. ಕೆಲವು ಹಿರಿಯ ಸದಸ್ಯರು ಇದನ್ನು ನಾಳೆಗೆ ಮುಂದೆ ಹಾಕಿ ಎಂದು ಹೇಳುತ್ತಿದ್ದಾರೆ. ಈ ವಿಚಾರವನ್ನು ಈ ಸದನದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಲಿಲ್ಲವೆಂಬುದು ಪತ್ರಿಕೆಗಳಲ್ಲಿ ಬರಲಿ ಎಂಬ ಉದ್ದೇಶದಿಂದ ಅವರು ವಾದ ಮಾಡುತ್ತಿದ್ದಾರೆ ಎಂಬುದು ಇದರಿಂದ ಮನವರಿಕೆಯಾಗುತ್ತದೆ. ಇದರ ಬಗ್ಗೆ ಬಹುಭಾಗ ಹಿರಿಯ ಸದಸ್ಯರು ವಿರೋಧ ಮಾಡುತ್ತಿದ್ದಾರೆಯೇ ವಿನಹ ಹೊಸ ಸದಸ್ಯರಾರೂ ಅಡ್ಡಿ ಮಾಡುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ಮತ್ತು ಸದಸ್ಯರ ವರ್ತನೆಗಳನ್ನು ಯಾವುದೇ ಸದಸ್ಯರು ಲಘುವಾಗಿ ಟೀಕೆ ಮಾಡಬಾರದು. ಈ ಸಭೆಯ ಸದಸ್ಯರೆಲ್ಲರೂ ಜವಾಬ್ದಾರಿಯುಳ್ಳ ಸದಸ್ಯರಿದ್ದಾರೆ. ಯಾವುದೋ ಒಂದು ದುರುದ್ದೇಶದಿಂದ ಇದು ಪತ್ರಿಕೆಯಲ್ಲಿ ಬರಲಿ ಎಂದು ಈ ರೀತಿ ಮಾತನಾಡುತ್ತಿದ್ದಾರೆ, ಚರ್ಚೆ ಮಾಡುತ್ತಿದ್ದಾರೆ ಎಂದು ಸದಸ್ಯರ ವರ್ತನೆಯ ಬಗ್ಗೆ ಮಾತನಾಡತಕ್ಕದ್ದು ಸದನದ ಘನತೆಗೆ ಗೌರವತರತಕ್ಕದ್ದಲ್ಲ. ಇಡೀ ಬಿಲ್ಲು ಸಂಪೂರ್ಣವಾಗಿ ಬರಬೇಕು ಎಂದು ಸದಸ್ಯರು ಹೇಳತಕ್ಕ ಮಾತಿನಲ್ಲಿ ದುರುದ್ದೇಶವಿದೆಯೆಂದು ಪ್ರಸ್ತಾಪ ಮಾಡಲು ಇಚ್ಛೆ ಇಲ್ಲದೇ, ಮನಸ್ಸು ಇಲ್ಲದೇ ಈ ರೀತಿ ಮಾತನಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಇಷ್ಟು ಚರ್ಚೆಗೆ ಅವಕಾಶ ಕೊಟ್ಟಿದ್ದು ತಮ್ಮದೇ ತಪ್ಪು. ಯಾವುದೇ ಒಂದು ವಿಚಾರದ ಬಗ್ಗೆ ಚರ್ಚೆ ಮಾಡುವಾಗ ನಮಗೆ ತಿಳಿದಿರುವುದನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ಆದರೆ ಅವರು ಈ ರೀತಿ ಹೇಳುವುದಾದರೆ ಯಾವುದೇ ರೀತಿಯಿಂದಲೂ ನ್ಯಾಯಯುತವಾಗಿ ಚರ್ಚೆ ಮಾಡುವುದಕ್ಕೆ ಖಂಡಿತಾ ಆಗುವುದಿಲ್ಲ. ತಾವು ಈ ಬಗ್ಗೆ ನಮ್ಮ ರಕ್ಷಣೆಗೆ ಬರಬೇಕು. ಅವರು ಏನು ಮಾತುಗಳನ್ನು ಆಡಿದ್ದಾರೆ ಅದನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು ಹಾಗೂ ಅವು ಕಡತದಿಂದ ಹೊರ ಹೋಗಬೇಕು.

ಶ್ರೀ ಎಸ್. ಬಂಗಾರಪ್ಪ.—ಆ ಪದಗಳನ್ನು ವರದಿಯಿಂದ ತೆಗೆದುಹಾಕಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ತೆಗೆದುಹಾಕೋಣ, ಅದನ್ನು ಅವರು ತೆಗೆದುಹಾಕುತ್ತಾರೆ.

ಶ್ರೀ ಕೆ. ಮಲ್ಲಪ್ಪ.—ಶ್ರೀಮಾನ್ ಮೊಯ್ಲಿಯವರು ಅರ್ಥಮಾಡಿಕೊಳ್ಳಬೇಕು. ಅವರು ಹಿರಿಯ ನಾಯಕರಿದ್ದಾರೆ. ಹಾಗೂ ಅವರು ಆಡಳಿತವನ್ನು ನಡೆಸಿ ಅನುಭವಗಳನ್ನು ಗಳಿಸಿದ್ದು ಅವರೇನೂ ಅನನುಭವಿಗಳಲ್ಲ.

ಶ್ರೀ ಎಸ್. ಬಂಗಾರಪ್ಪ—ಆ ಪದಗಳನ್ನು ವರದಿಯಿಂದ ತೆಗೆಸಿಹಾಕಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ನೋಟಿಫಿಕೇಷನ್ ಬೇಕು ಎಂದು ಕೇಳಿದ್ದು ತಪ್ಪಲ್ಲ, ಚರ್ಚೆ ಫಲಪ್ರದವಾಗಬೇಕಾದರೆ ಅದು ಇರಬೇಕು. ಈ ವಿಚಾರವಾಗಿ ನಾನು ಪುನಃ ಹೇಳುತ್ತಿದ್ದೇನೆ. ನೋಟಿಫಿಕೇಷನ್ ಜೂನ್ ತಿಂಗಳಲ್ಲಿ ಗೆಜೆಟ್‌ನಲ್ಲಿ ಬಂದಿರುತ್ತದೆ. ಜುಲೈ ತಿಂಗಳಲ್ಲಿ ಆರ್ಡಿನೆನ್ಸ್ ಬಂದಿದ್ದು ಇದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿಯೂ ಮೊನ್ನೆ ತೀರ್ಮಾನವಾಗಿದೆ. ತಾವ್ಯಾರೂ ತಪ್ಪು ತಿಳಿದುಕೊಳ್ಳಬೇಡಿ. ತಮ್ಮ ಅಭಿಪ್ರಾಯದ ಪ್ರಕಾರ ಇಷ್ಟೊಂದು ಗಹನವಾದ ವಿಚಾರದ ಬಗ್ಗೆ, ಸಾರ್ವಜನಿಕರ ಮನಸ್ಸನ್ನು ಕದಡಿದ ಈ ಸರ್ಕಾರಿ ನೋಟಿಫಿಕೇಷನ್ ಗೆಜೆಟ್‌ನಲ್ಲಿ ಬಂದ ಮೇಲೆ ಶಾಸಕರು ಅದನ್ನು ಓದದೆಯೇ ಇರುತ್ತಾರೆಯೇ ? ಪ್ರತಿಯೊಬ್ಬ ಸದಸ್ಯರೂ ಗೆಜೆಟ್ ತೆಗೆದು ಕೂಲಂಕುಷವಾಗಿ ಓದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮಹತ್ವವಾದ ನೋಟಿಫಿಕೇಷನ್ ಒಂದು ತಿಂಗಳ ಹಿಂದೆ ಬಂದಿದೆ. ಸಾರ್ವಜನಿಕರ ಮಹತ್ವದ ವಿಚಾರದ ಬಗ್ಗೆ ಬಂದಿರತಕ್ಕ ನೋಟಿಫಿಕೇಷನ್ ಇದು. ಎಲ್ಲರೂ ಇದನ್ನು ಓದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಓದುವುದು ಅವರ ಕರ್ತವ್ಯವೆಂದು ನಾನು ಅರಿತುಕೊಂಡಿದ್ದೇನೆ. 2ನೇದಾಗಿ ಆರ್ಡಿನೆನ್ಸ್ ಬಂದು 1 ತಿಂಗಳಾಗಿದೆ. ಹಾಗೂ ಇದರ ಬಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಚರ್ಚೆಯಾಗಿದೆ. ಎಲ್ಲಕ್ಕೂ

ಹೆಚ್ಚಾಗಿ ಇವತ್ತು ಚರ್ಚೆ ಪ್ರಾರಂಭ ಆಗುವುದಕ್ಕೆ ಮೊದಲೇ, ಈ ಮಸೂದೆ ಬಗ್ಗೆ ಚರ್ಚೆ ಬೇಡ ಎಂದಿದ್ದರೆ ಬೇರೊಂದು ಮಸೂದೆಯ ಮೇಲೆ ಚರ್ಚೆ ಮಾಡಬಹುದಿತ್ತು. ಈ ಮಸೂದೆಯ ಮೇಲೆ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಚರ್ಚೆ ಇನ್ನೂ ಪ್ರಾರಂಭವಾಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚರ್ಚೆ ಆರಂಭವಾಗಿದೆ. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಖಾರ್ಗೆಯವರು ಆಗಲೇ ಪ್ರಾರಂಭ ಮಾಡಿದ್ದಾರೆ. ರೆಕಾರ್ಡ್ ಇದೆ. ತಾವು ಮೊದಲೇ ಹೇಳಿದ್ದರೆ ಬೇರೆ ಮಸೂದೆಯನ್ನು ಇವತ್ತು ತೆಗೆದುಕೊಂಡು ಇದನ್ನು ನಾಳೆ ತೆಗೆದುಕೊಳ್ಳಬಹುದಿತ್ತು. ಮಸೂದೆ ಮಂಡಿಸಿದ್ದು ಖಾರ್ಗೆಯವರು ಚರ್ಚೆ ಮಾಡಿದ್ದಾರೆ. ಒಂದು ಸಲ ಚರ್ಚೆ ಆರಂಭವಾದ ಮೇಲೆ ಅದನ್ನು ಮುಂದೆ ಹಾಕುವುದು ಸರಿಯೇ ? ಇದು ವಾದದ ವಿಚಾರವಲ್ಲ. ಈ ಮಸೂದೆ ಬಗ್ಗೆ ನಾಳೆಯ ಬದಲು ಇವತ್ತೆ ಚರ್ಚೆ ಮಾಡಿದರೆ ಏನೂ ತೊಂದರೆ ಇಲ್ಲ. ಈ ಮಸೂದೆ ಬಗ್ಗೆ ಚರ್ಚೆ

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಇಂದೇ ಆಗಬೇಕೆಂದೇನೂ ಸರ್ಕಾರದ ಇಚ್ಛೆ ಇಲ್ಲ ಇದರ ಬಗ್ಗೆ ಚರ್ಚೆಯನ್ನು ನಾಳೆಯೂ ಮುಂದುವರಿಸಬಹುದು. ಇವತ್ತು ಚರ್ಚೆ ಪ್ರಾರಂಭ ಮಾಡೋಣ. ಕೆಲವರು ವಿಚಾರಗಳನ್ನು ಹೇಳಲಿ. ನಾಳೆ ವಿವಿಧ ಪಕ್ಷಗಳ ನಾಯಕರು ಇದರ ಬಗ್ಗೆ ಚರ್ಚೆ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಯಾಪಿಟೇಷನ್ ಫೀ ಬಗ್ಗೆ ತಮ್ಮ ಗ್ರಹಗತಿ ಚೆನ್ನಾಗಿ ಇಲ್ಲ. ಒಂದು, ಮಂತ್ರಿಗಳಿಲ್ಲ. ಎರಡನೆಯದಾಗಿ ನಿಮಗೆ ಗಳಿಗೆ ಬಹಳ ಚೆನ್ನಾಗಿದೆ.

ಶ್ರೀ ಭೀಮಣ್ಣ ಖಂಡ್ರೆ.—ಚರ್ಚೆ ಪ್ರಾರಂಭವಾದ ಮೇಲೆ ಬಿಲ್ ತಂದಿದ್ದೀರಿ. ಇಲ್ಲಿ ಚರ್ಚೆ ಮಾಡುವಾಗ ಎಲ್ಲಾ ಕಾಪಿಗಳೂ ಇಲ್ಲಿ ಇರಬೇಕಾಗುತ್ತದೆ ಎಂದು ಮಾನ್ಯ ಖಾರ್ಗೆಯವರು ಅಬ್ಜೆಕ್ಷನ್ ರೈಸ್ ಮಾಡಿದ್ದಾರೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡತಕ್ಕ ಒಂದು ತತ್ವವನ್ನು ಈ ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಬಿ. ವಿ. ಬಿಮ್ಮನಕಟ್ಟಿ.—ಮಾನ್ಯ ಮಲ್ಲಪ್ಪನವರು ದುರುದ್ದೇಶದಿಂದ ವರ್ತನೆ ಮಾಡುತ್ತಿದ್ದಾರೆಂದು ಹೇಳಿದರು. ಅದನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ಅದನ್ನು ತೆಗೆಸಿ ನೋಡುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಜನತಾ ಸರ್ಕಾರ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆನ್ನುವ ತತ್ವವನ್ನು ಒಪ್ಪಿಕೊಂಡು ಅದನ್ನು ಇವತ್ತು ಮಸೂದೆಯ ರೂಪದಲ್ಲಿ ಇವತ್ತು ಇಲ್ಲಿ ತಂದಿದೆ. ಇದನ್ನು ಯಾವ ರೀತಿ ಬಗೆಹರಿಸಬೇಕೆಂಬ ಬಗ್ಗೆ ಇಡೀ ದಿವಸ ಮಂತ್ರಿ ಮಂಡಲದಲ್ಲಿ ಚರ್ಚೆ ಮಾಡಲಾಗಿದೆ. ಆರೋಗ್ಯ ಮಂತ್ರಿಯವರಾದ ಸಿಂಧ್ಯಾರವರು ಕೊಟ್ಟಂತಾವರದಿಯನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಿ, ಹಿಂದೆ ಮಾಡಿದಂಥ ತಪನ್ನು ತಿದ್ದಿಕೊಳ್ಳುವಂಥಾ ಮಹಾ ಪ್ರಯತ್ನವನ್ನು ಬಿಲ್ ತರುವುದರ ಮೂಲಕ ಮಾಡಿದ್ದಾರೆ. ತಮಗೆಲ್ಲಾ ಗೊತ್ತಿದ್ದ ಹಾಗೆ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕೇವಲ ಸರ್ಕಾರಿ ಆಜ್ಞೆಗಳ ಮೂಲಕ ಸೀಟು ಕೊಡುವ ವ್ಯವಹಾರ ನಡೆಯುತ್ತಿತ್ತು. ಯಾವ ಮಟ್ಟದಲ್ಲಿ ಈ ಒಂದು ವ್ಯವಹಾರ ನಡೆಯುತ್ತಿತ್ತು ಅಂದರೆ, Karnataka has become an international market for the sale of technical degrees. ಈ ಒಂದು ಕ್ರೆಡಿಟ್ ಹಿಂದೆ ಸರ್ಕಾರ ನಡೆಸಿದವರಿಗೆ ಹೋಗಿತ್ತು. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ವಿಚಾರವನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ, ದೃಢವಾದ ನಿಲುವನ್ನು ತೆಗೆದುಕೊಂಡು, ಬರುವ 5 ವರ್ಷಗಳಲ್ಲಿ ಸಂಪೂರ್ಣವಾಗಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ನೀತಿಗೆ ಬದ್ಧರಾಗಿದ್ದಾರೆ,

ಶ್ರೀ ಜಿ. ಡಿ. ಸೋಮಪ್ಪ.—5 ವರ್ಷ ಏತಕ್ಕೆ ಸ್ವಾಮಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—35 ವರ್ಷಗಳಲ್ಲಿ ಮಾಡದೇ ಇರುವುದನ್ನು ಒಂದೇ ವರ್ಷದಲ್ಲಿ ಮಾಡಿದ್ದೇವೆ ಈ ವಿಷಯ ಹೈಕೋರ್ಟಿಗೆ ಹೋಗಿ, ಅಲ್ಲಿ ಏನು ತೀರ್ಮಾನ ಆಯಿತು ಎನ್ನುವುದು ತಮಗೆ ಗೊತ್ತಿದೆ. ಬರೀ ಸರ್ಕಾರೀ ಆಜ್ಞೆಗಳ ಮೂಲಕ ಸೀಟುಗಳನ್ನು ಕೊಡುತ್ತಿದ್ದಾರೆ. ಇದಕ್ಕೆ ಕಾನೂನಿನ ಬೆಂಬಲ ಇಲ್ಲವೆಂದು ಪ್ರತಿಪಾದನೆ ಮಾಡಿ ; ಹೈಕೋರ್ಟು ನಿರ್ಣಯ ಮಾಡಿತ್ತು. ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಇದನ್ನು ರದ್ದುಪಡಿಸಬೇಕೆಂಬ ಉದ್ದೇಶದಿಂದ ಇಂದು ಇಲ್ಲಿ ಮಸೂದೆಯನ್ನು ತರಲಾಗಿದೆ. ಈ ಮಸೂದೆಯ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದಾರೆಂದರೆ,

"A Bill to prohibit the collection of capitation fee for admission to educational institutions in the State of Karna-

taka and matters relating thereto.

Where as the practice of collecting capitation fee for admitting students into educational institutions is wide-spread in the State ;

And where as the undesirable practice besides contributing to large scale commercialisation of educational has not been conducive to the maintenance of educational standards ;

And where as it is considered necessary to effectively curb this evil practice in public interest by providing for prohibition of collection of capitation fee and matters relating thereto."

This is the object of the Bill.

ತಮಗೆ ಗೊತ್ತಿದೆ. ಒಬ್ಬ ವಿದ್ಯಾರ್ಥಿ ಎಂ.ಬಿ.ಬಿ.ಎಸ್ ಮುಗಿಸಬೇಕಾದರೆ 5ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಪರಿಸ್ಥಿತಿ ಹೀಗಿರುವಾಗ ಕ್ಯಾಪಿಟೇಷನ್ ಶುಲ್ಕವನ್ನು ಯಾವ ಹಂತದಲ್ಲಿ ರದ್ದು ಮಾಡಬೇಕೆಂಬ ಪ್ರಶ್ನೆ ಸ್ವಾಭಾವಿಕವಾಗಿ ಬರುತ್ತೆ. ಕರ್ನಾಟಕದ ವಿದ್ಯಾರ್ಥಿಗಳಿಗೆ ರದ್ದು ಮಾಡಲಾಗಿದೆ. ಯಾವ ಖಾಸಗಿ ಮೆಡಿಕಲ್ ಕಾಲೇಜುಗಳು ಕೂಡ ಕರ್ನಾಟಕದ ವಿದ್ಯಾರ್ಥಿಗಳಿಂದ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುವಂತಿಲ್ಲ. Section 3 reads thus :-

> "Not with standing anything contained in any law for the time being in force, no capitation fee shall be collected by or on behalf of any educational institution or by any person who is incharge of or is responsible for the management of such institutions."

ಕ್ಯಾಪಿಟೇಷನ್ ಫೀ ಕಲೆಕ್ಟ್ ಮಾಡಕೂಡದೆಂದು ಕಾನೂನಿನಲ್ಲಿ ಪ್ರೊವೈಸೋ ಮಾಡಿದ್ದಾರೆ. ಇದರಿಂದ ಯಾವ ಖಾಸಗೀ ಮೆಡಿಕಲ್ ಕಾಲೇಜಿನವರು ಕ್ಯಾಪಿಟೇಷನ್ ಫೀಯನ್ನು ವಸೂಲು ಮಾಡುವಂತಿಲ್ಲ. ಖಾಸಗೀ ಕಾಲೇಜುಗಳನ್ನು ವಹಿಸಿಕೊಳ್ಳುವುದಕ್ಕೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಸದ್ಯದಲ್ಲಿ ಚೆನ್ನಾಗಿಲ್ಲ. ರಾಷ್ಟ್ರೀಕರಣ ಮಾಡಬೇಕಾದರೂ ಕೇಂದ್ರ ಸರ್ಕಾರದ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಅನುಮತಿ ಬೇಕೆಂದು ನನಗನ್ನಿಸುತ್ತದೆ. ಇದೆಲ್ಲಾ ಆಗುವುದರೊಳಗೆ ಈ ವರ್ಷವೇ ಕ್ಯಾಪಿಟೇಷನ್ ಫೀ ರದ್ದು ಮಾಡುವುದಾಗಲೀ, ರಾಷ್ಟ್ರೀಕರಣ ಮಾಡುವುದಾಗಲೀ ಸಾಧ್ಯವಿಲ್ಲದ ಮಾತಾಗಿತ್ತು. ಹಿಂದಿನ ಸರ್ಕಾರ ಇದರ ಬಗ್ಗೆ ಮನಸ್ಸು ಕೊಟ್ಟಿರಲಿಲ್ಲ. ಚರ್ಚೆ ಕೂಡ ಮಾಡಿರಲಿಲ್ಲ. ಬೇರೆ ರಾಜ್ಯಗಳಲ್ಲಿ 2–3 ಕಾಲೇಜುಗಳಿದ್ದು ರದ್ದು ಮಾಡಿರಬಹುದು. ಕರ್ನಾಟಕದಲ್ಲಿ ಜನತಾ ಸರ್ಕಾರ ಕೂಡ ಒಂದು ಕಾನೂನಿನ ಚೌಕಟ್ಟಿನಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ವಸೂಲು ಮಾಡುತ್ತಿದ್ದ ಕ್ಯಾಪಿಟೇಷನ್ ಶುಲ್ಕವನ್ನು ನಿಯಂತ್ರಣ ಮಾಡುವುದರಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಇದು ಶ್ಲಾಘಿಸಬೇಕಾದ ವಿಷಯವೆಂದು ಹೇಳುತ್ತೇನೆ. ಅದನ್ನು ತಾವು ಕೂಡ ಒಪ್ಪುತ್ತೀರಿ. ಪ್ರೊವೆಸೋನಲ್ಲಿ ಏನು ಹೇಳಿದ್ದಾರೆ.

> "Provided that subject to suh rules as may be prescribed or such conditions as may be specified by general or special order from time to time, the Government may, not with standing anything contained in this Act permit any educational institution established before the date of commencement of this Act and maintained solely or substantially out of amounts collect as capitations, to continue to receive such capitation fee or cash deposits in such manner to such extent and for such period as the Government, may by order, specify so however that such period shall not in any case extend beyond five years from such date."

ಈ ಕಾನೂನು ಬರುವುದಕ್ಕೆ ಮುಂಚಿತವಾಗಿ, ಕರ್ನಾಟಕದ ವಿದ್ಯಾರ್ಥಿಗಳು ಇಷ್ಟು, ಬೇರೆ ರಾಜ್ಯಗಳಿಂದ ಬಂದಂಥ ವಿದ್ಯಾರ್ಥಿಗಳು ಇಷ್ಟು, ಹಾಗೂ ಹೊರದೇಶಗಳಿಂದ ಬಂದಂಥ ವಿದ್ಯಾರ್ಥಿಗಳು ಇಷ್ಟು ಕ್ಯಾಪಿಟೇಷನ್ ಫೀ ಕೊಡಬೇಕೆಂದು ಒಂದು ಪಾಲಸಿಯನ್ನು ಇಟ್ಟುಕೊಂಡಿದ್ದರು. ಇದನ್ನು ನಿಯಂ

ತ್ರಣ ಮಾಡುವುದಕ್ಕೆ ಯಾವ ಕಾನೂನನ್ನೂ ತಂದಿರಲಿಲ್ಲ. ಸಂಪೂರ್ಣವಾದ ಹಿಡಿತವನ್ನು ಇಟ್ಟು ಕೊಂಡು ಖಾಸಗಿ ಮೆಡಿಕಲ್ ಕಾಲೇಜಿನವರು ಕ್ಯಾಪಿಟೇಷನ್ ಫೀಯನ್ನು ವಸೂಲು ಮಾಡುತ್ತಿದ್ದರು. ಒಬ್ಬೊಬ್ಬ ಮಂತ್ರಿಗಳು ಬರೆದುಕಳುಹಿಸಿದರೆ ಇಷ್ಟು ಸೀಟು ಕೊಡಬೇಕು, ಆರೋಗ್ಯ ಮಂತ್ರಿಗಳಿಗೆ ಇಷ್ಟು ಸೀಟು, ಮುಖ್ಯ ಮಂತ್ರಿಗಳಿಗೆ ಇಷ್ಟು ಸೀಟು ಕೊಡಬೇಕೆಂದು ಆಡಳಿತ ಮಂಡಳಿಯವರ ಮೇಲೆ ಹಿಡಿತವನ್ನು ಇಟ್ಟುಕೊಂಡಿದ್ದರು. ಆದರೆ, ಇಂದು ಒಂದು ಸೀಟನ್ನು ಕೂಡ ಸರ್ಕಾರ ಇಟ್ಟುಕೊಂಡಿಲ್ಲ. ಕರ್ನಾಟಕ ವಿದ್ಯಾರ್ಥಿಗಳು 5,000 ರೂಪಾಯಿ ಟ್ಯೂಷನ್ ಮಾತ್ರ ಕಟ್ಟಬೇಕು. ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಗೊತ್ತು ಮಾಡಿರುವ ಕಾಲೇಜುಗಳಲ್ಲಿ ಸುಮಾರು 225-230 ಸೀಟುಗಳಿಗೆ ಯಾವ ರೀತಿಯ ಕ್ಯಾಪಿಟೇಷನ್ ಫೀಯನ್ನೂ ಕಟ್ಟಬೇಕಾಗಿಲ್ಲ. **So, the capitation fee has been abolished to the extent of 1/3 of the total seats in Karnataka. Are you not complimenting this ?**
ಯಾವ ಕಾಲದಲ್ಲಿ ಇಂಥ ಒಂದು ಕೆಲಸವನ್ನು ಮಾಡಿದ್ದಿರಿ, ಜನತಾ ಸರ್ಕಾರ ಅಧಿಕಾರಕ್ಕೆ ಬಂದ 6 ತಿಂಗಳಲ್ಲಿ ಇಂಥ ಒಂದು ಕ್ರಮವನ್ನು ತೆಗೆದುಕೊಂಡಿದೆ. 35 ವರ್ಷಗಳಲ್ಲಿ ಈ ಕೆಲಸವನ್ನು ಹಿಂದೆ ಯಾರಾದರೂ ಮಾಡಿದ್ದರೆ ? ನಾವು ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಕ್ಯಾಪಿಟೇಷನ್ ಫೀ ಇಲ್ಲದೆ, 250 ಸೀಟುಗಳನ್ನು ಕೊಡುತ್ತಿದ್ದೇವೆ. ಅದರ ಜೊತೆಗೆ ಸರ್ಕಾರದ ಡಿಸ್ಕ್ರೀಷನ್‌ನಿಂದ ಸೀಟುಗಳನ್ನು ಕೊಡುವುದು ತಪ್ಪಿಸಿದ್ದೇವೆ. ಮಂತ್ರಿಗಳಿಗೆ ಸೀಟು ಕೊಡುತ್ತಿದ್ದುದನ್ನು ತಪ್ಪಿಸಿದ್ದೇವೆ. ಹಿಂದೆ 90 ಪರ್‌ಸೆಂಟ್ ಪಡೆದುಕೊಂಡ ವಿದ್ಯಾರ್ಥಿ ಇದ್ದರೂ ಸಹ, ಮುಖ್ಯ ಮಂತ್ರಿಗಳು 10 ಸೀಟುಗಳನ್ನು ಹೇಳಿದ್ದಾರೆ, ಎಜುಕೇಷನ್ ಮಿನಿಸ್ಟರ್ ಇಷ್ಟು ಸೀಟುಗಳನ್ನು ಹೇಳಿದ್ದಾರೆ, ಹೆಲ್ತ್ ಮಿನಿಸ್ಟರ್ ಇಷ್ಟು ಸೀಟುಗಳನ್ನು ಕೊಡಬೇಕೆಂದು ಹೇಳಿದ್ದಾರೆ ಎಂದು ಹೇಳು ವಂತಾದ್ದು ಇದ್ದುದನ್ನು ತಪ್ಪಿಸಿದ್ದೇವೆ. ಮಂತ್ರಿಗಳಿಗೆ ಸೀಟು ಕೊಡತಕ್ಕ ಪದ್ಧತಿಯನ್ನು ಜಾರಿ ಮಾಡಿಕೊಂಡು ಬಂದಿದ್ದಂತಹ ನೀವು ನಮಗೆ ಏನಾದರೂ ಹೇಳಲಿಕ್ಕೆ ಹಕ್ಕು ಇದೆಯೇ ಎಂದು ಕೇಳ ಬೇಕಾಗಿದೆ. ಈ ಅಕಾಡೆಮಿಕ್ ಇಯರ್‌ನಿಂದಲೇ ಜಾರಿಗೆ ಬರುವಂತೆ ಆರ್ಡಿನೆನ್ಸ್ ಮಾಡಿ ಅದಕ್ಕೆ ಒಂದು ಕಾನೂನು ಬಲ ಕೊಟ್ಟು, ಈ ಬಿಲ್ಲನ್ನು ಈ ಸದನದ ಮುಂದೆ ತಂದು ಕಾನೂನು ಮಾಡತಕ್ಕದ್ದು ನೋಡಿದರೆ, ಈ ತರಹ ಸರ್ಕಾರ ಬೇರೆ ಇಲ್ಲ ಎಂದು ಹೇಳಬೇಕಾಗುತ್ತದೆ ಬಿಹಾರ್‌ನಲ್ಲಿ ಹಿಂದೆ ಮೂರು ಮೆಡಿಕಲ್ ಕಾಲೇಜುಗಳು ಇದ್ದುವು. ಅಲ್ಲಿ ಕರ್ಪೂರಿ ಠಾಕೂರ್ ಅವರು ಇದ್ದಾಗ ರಾಷ್ಟ್ರೀ ಕರಣ ಮಾಡಿದರು. ಅಲ್ಲಿ ಅಮ್ಮನವರ ಸರ್ಕಾರದವರು ರದ್ದು ಮಾಡಿಸಿ ಕ್ಯಾಪಿಟೇಷನ್ ಫೀ ತೆಗೆದು ಕೊಳ್ಳಿ ಎಂದು ಹೇಳಿಬಿಟ್ಟರು. ಇಡೀ ಭಾರತದಲ್ಲಿ ಕ್ಯಾಪಿಟೇಷನ್ ಫೀ ರದ್ದು ಮಾಡಿರುವುದು ಅಂದರೆ ಆಂಧ್ರಪ್ರದೇಶದ ಎನ್. ಟಿ. ರಾಮರಾವ್ ಅವರು ರದ್ದುಮಾಡಿದ್ದಾರೆ. ಅಲ್ಲಿ ಬಹಳ ಕಡಿಮೆ ಕಾಲೇಜುಗಳು ಇವೆ, ನಮ್ಮಲ್ಲಿ ಜಾಸ್ತಿ ಇವೆ. ಎಲ್ಲಾ ಕಾಲೇಜುಗಳನ್ನು ಈ ವರ್ಷದಿಂದಲೇ ರಾಷ್ಟ್ರೀ ಕರಣ ಮಾಡಿದರೆ ಅದಕ್ಕಿಂತಲೂ ಸಂತೋಷ ನಮ್ಮ ಸರ್ಕಾರಕ್ಕೆ ಬೇರೆ ಇಲ್ಲ. ಆದರೆ, ರಾಷ್ಟ್ರೀಕರಣ ಮಾಡಿದಂಥ ಎಲ್ಲಾ ಮೆಡಿಕಲ್ ಕಾಲೇಜುಗಳಿಗೂ ಕಾಂಪನ್‌ಸೇಷನ್ ಹಣ ಕೊಡಬೇಕಾಗುತ್ತದೆ. ಅದಕ್ಕೆ ನಿಮ್ಮ ಕೇಂದ್ರ ಸರ್ಕಾರದ ಅನುಮತಿ ಕೂಡಾ ಬೇಕಾಗುತ್ತದೆ. ಮತ್ತೆ ಅದರ ಸ್ಟ್ಯಾಂಡರ್ಟ್ ಕೂಡ ಉಳಿಸಿಕೊಳ್ಳಬೇಕಾಗುತ್ತದೆ. ಈ ಅಕಾಡೆಮಿಕ್ ಇಯರ್‌ನಿಂದ ಕ್ಯಾಪಿಟೇಷನ್ ಫೀ ರದ್ದು ಮಾಡಿ, ಎಲ್ಲಾ ಸಂಸ್ಥೆಗಳನ್ನು ಸರ್ಕಾರದವರೇ ತೆಗೆದುಕೊಂಡು ನಡೆಸಲಿಕ್ಕೆ ಸಾಧ್ಯವಿದೆಯೇ, ಬೇಕಾದರೆ ಇದರ ಬಗ್ಗೆ ಮುಂದಿನ ವರ್ಷದಿಂದ ಮಾಡಿ ಎಂದು ತಾವು ಒತ್ತಾಯ ಮಾಡಿ, ನಾನು ಬೇಡ ಎಂದು ಹೇಳುವು ದಿಲ್ಲ. ಈಗ ತಾವು ಕ್ಯಾಪಿಟೇಷನ್ ಫೀ ತೊಲಗಿಸಿ ಎಂದು ಹೇಳಬಹುದು, ಕ್ಯಾಪಿಟೇಷನ್ ಫೀ ರದ್ದು ಮಾಡಲಿಕ್ಕೆ ಈ ಬಿಲ್ಲನ್ನು ತಂದಿರುವುದು, ಸೆಕ್ಷನ್ ಮೂರರಲ್ಲಿ ಅದನ್ನೇ ಹೇಳುತ್ತದೆ. ಯಾವು ದಾದರೂ ಒಂದು ಸಂಸ್ಥೆ ತನ್ನ ಫೆಸಿಲಿಟಿಗೋಸ್ಕರ, ತನ್ನದೇ ಆದಂತಾದ್ದು ನಿರ್ಮಾಣಮಾಡಿ ಅವರ ಸ್ಟ್ಯಾಫ್‌ಗೆ ಸಂಬಳ ಕೊಡತಕ್ಕ ವ್ಯವಸ್ಥೆ ಮಾಡಿ, ಕ್ಯಾಪಿಟೇಷನ್ ಫೀ ಇಲ್ಲದೆ ಮಾಡಿದರೆ ಅದು ಕಮ್ಯುನಿಟಿಗೆ ಒಂದು ಆಸ್ತಿ ಇದ್ದಹಾಗೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಸೂರತ್‌ಕಲ್‌ನಲ್ಲಿ ಕಾಪಿಟೇಷನ್ ಫೀ ಇಲ್ಲ ಎಂದು ತೆಗೆದಿದ್ದಾರೆ. ಇಲ್ಲಿ ರಾಮಯ್ಯ ಕಾಲೇಜ್ ವ್ಯವಹಾರ ತೆಗೆದುಕೊಂಡರೆ ಆ ವ್ಯವಹಾರ ಗೊತ್ತಿಲ್ಲ. ಕ್ಲಿನಿಕಲ್ ಫೆಸಿಲಿಟಿಗೋಸ್ಕರ 10 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆಂದು ತಿಳಿಸಿದರೆ, ಅದೆಲ್ಲಾ ಒಂದು ಕಮ್ಯುನಿಟಿಗೆ ಆಸ್ತಿಯಾಗುತ್ತದೆ. ಈ ಕ್ಯಾಪಿಟೇಷನ್ ಫೀ ಇಲ್ಲದೇ, ಬೃಹದಾಕಾರ ವಾಗಿ ಬೆಳೆಸುವುದಾದರೆ ಟೆಕ್ನೀಷಿಯನ್ ಉತ್ಪತ್ತಿ ಮಾಡುವುದಾದರೆ, ಅದು ಒಂದು ಸಮಾಜಕ್ಕೆ ಆಸ್ತಿ ಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಮಾತನಾಡುವಾಗ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಕ್ಯಾಪಿಟೇಷನ್ ಫೀ ರದ್ದುಮಾಡುವುದಕ್ಕೆ ಕೇಂದ್ರದವರ ಆಕ್ಷೇಪಣೆ ಇದೆ ಎಂದು ಹೇಳಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಇಲ್ಲಿಯೇ ಇದ್ದಾರೆ. ಯಾವು ದಾದರೂ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಬಿಹಾರ್‌ನಲ್ಲಿ ರದ್ದು

ಮಾಡಿದರು, ಕೇಂದ್ರ ಸರ್ಕಾರ ರದ್ದು ಮಾಡಿದ್ದು ತಪ್ಪು ಎಂದು ಹೇಳುವಂತಾದ್ದಕ್ಕೆ ಆಧಾರ ಇಲ್ಲ. ಕ್ಯಾಪಿಟೇಷನ್ ಫೀ ರದ್ದು ಮಾಡಿದಂಥ ಕಾನೂನನ್ನು ಕೇಂದ್ರ ಸರ್ಕಾರ ವಜಾ ಮಾಡಿದೆ ಅದಕ್ಕೆ ಒಪ್ಪಿಗೆ ನೀಡಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದುದು. ಪಾರ್ಲಿಮೆಂಟಿನಲ್ಲಿ ಒಂದಲ್ಲ ಅನೇಕ ಬಾರಿ ಸ್ಪಷ್ಟವಾದ ನಿಲುವನ್ನು ಈ ಬಗ್ಗೆ ತಿಳಿಸಿದ್ದಾರೆ. ಕ್ಯಾಪಿಟೇಷನ್ ಫೀ ಎಲ್ಲಾದರೂ ಜಾರಿ ಯಲ್ಲಿದೆಯೇ ಅಂದರೆ ಆಂಧ್ರ ಮತ್ತು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಕಾಂಗ್ರೆಸ್ ಅಧಿಕಾರ ಮಾಡತಕ್ಕ ಯಾವ ರಾಜ್ಯದಲ್ಲಿಯೂ ಇಲ್ಲ. ಈಗ ಮಾನ್ಯ ಆರೋಗ್ಯ ಸಚಿವರು ಇಲ್ಲೇ ಇದ್ದಾರೆ. ಕ್ಯಾಪಿ ಟೇಷನ್ ಫೀ ರದ್ದು ಮಾಡಬಾರದು ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲ ಎನ್ನುವ ಡಾಕ್ಯು ಮೆಂಟ್ಸ್ ಏನಾದರೂ ಇದ್ದರೆ ಅದನ್ನು ಈ ಸದನಕ್ಕೆ ಒಪ್ಪಿಸಬೇಕೆಂದು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೆ, ರಾಜ್ಯ ಸರ್ಕಾರದವರು ತೆಗೆದುಕೊಳ್ಳತಕ್ಕಂಥ ಕ್ಯಾಪಿ ಟೇಷನ್ ಫೀ ಏನಿದೆ ಇದನ್ನು ರದ್ದು ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಆಕ್ಷೇಪಣೆ ಇದೆ ಎನ್ನುವ ವಿಚಾರದ ಬಗ್ಗೆ ಈಗ ಚರ್ಚೆಯಾಗಿದೆ. ಅಲ್ಲದೆ ಕೆಲವು ಸದಸ್ಯರು ಕೂಡ ಆರೋಪ ಮಾಡಿದ್ದಾರೆ. ಅದಕ್ಕೆಲ್ಲಾ ನಾನು ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದಂಥ ರಾಷ್ಟ್ರಮಟ್ಟದ ಆರೋಗ್ಯ ಸಚಿವರ ಸಮ್ಮೇಳನದಲ್ಲಿ ನಾನು ಭಾಗವಹಿಸಿದ್ದು ಅಲ್ಲಿಯೂ ಪ್ರಸ್ತಾಪ ಮಾಡಿ ದ್ದೇನೆ. ಹಿಂದೆ ಈ ಕ್ಯಾಪಿಟೇಷನ್ ಅನಿಷ್ಟ ಪದ್ಧತಿಯನ್ನು ಹುಟ್ಟು ಹಾಕಿದ್ದೀರಿ. ಈಗ ನೀವು ಸಹ ಈ ಅನಿಷ್ಟ ಪದ್ಧತಿ ಹೋಗಬೇಕೆಂದು ಹೇಳುವುದಾದರೆ ಈ ಸದನ ಸ್ವೀಕಾರ ಮಾಡುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಕ್ಷಣ ಬೇಕಾದರೆ ರದ್ದು ಮಾಡಿ ಸಂಪೂರ್ಣವಾಗಿ ನಾವು ಒಪ್ಪಿಗೆ ಕೊಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅದಕ್ಕೆ ನಿಮ್ಮ ಸಹಕಾರಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಧೈರ್ಯ ಇದ್ದರೆ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಮಗೆ ಧೈರ್ಯ ಇದೆ. ಇಲ್ಲದೇ ಇದ್ದರೆ ಈ ಮಸೂದೆ ತರುತ್ತಾ ಇರಲಿಲ್ಲ. ಇದಕ್ಕೆಲ್ಲಾ ನಾನು ನಾಳೆ ತಮಗೆ ಉತ್ತರ ಕೊಡುತ್ತೇನೆ. ಕೇಂದ್ರ ಸರ್ಕಾರದಿಂದ ಎಲ್ಲಿ ಸಹಕಾರ ಬೇಕು, ನಮಗೆ ಏನು ಅಡಚಣೆ ಇದೆ, ಇದರ ಬಗ್ಗೆ ನಾನು ಹೇಳಿಕೆ ಕೊಡುತ್ತೇನೆ. ಇವೊತ್ತು ಮಹೇಶ್ವರಪ್ಪನವರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ನಾವೇ ಏನೋ ಹುಟ್ಟಿ ಹಾಕಿದ್ದೇವೆಂದು ಹೇಳಿದರು. ಇದು ಯಾವ ಕಾಲದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಪರವಾನಿಗೆ ಕೊಟ್ಟಿದ್ದು ಎನ್ನುವುದನ್ನು ತಿಳಿದುಕೊಳ್ಳಬೇಕು. ಕ್ಯಾಪಿಟೇಷನ್ ಫೀ ಪ್ರಾರಂಭವಾಗಿದ್ದು ಯಾರ ಕಾಲದಲ್ಲಿ ಅಂದರೆ ನಿಜಲಿಂಗಪ್ಪನವರ ಕಾಲದಲ್ಲಿ ಪ್ರಾರಂಭವಾಗಿದ್ದು. ಮೊದಲು 5 ಸಾವಿರ ಇದ್ದುದು ನಂತರ 10 ಸಾವಿರ ನಂತರ 20 ಸಾವಿರ ಹೀಗೆ ಒಂದೂವರೆ ಲಕ್ಷರೂಪಾಯಿಗೆ ಹೋಗಿರ ಬಹುದು. ಆ ಪ್ರಶ್ನೆ ಮುಖ್ಯ ಅಲ್ಲ. ಯಾವುದೋ ಪಾಪದ ಕೂಸನ್ನು ಇಲ್ಲಿ ನಮ್ಮ ಕಡೆ ಏತಕ್ಕೆ ಎಸೆಯುತ್ತೀರಾ ? ಅದನ್ನು ನೀವೇ ತೆಗೆದುಕೊಳ್ಳಿ. ಅದು ನಿಮ್ಮ ಪಾಪದ ಕೂಸು ಅದು.

ಶ್ರೀ ಆರ್. ಎಲ್. ಜಾಲಪ್ಪ.—ಕೂಸು ನಿಜಲಿಂಗಪ್ಪನವರದು, ಆದರೆ ಅದನ್ನು ಸಮೃದ್ಧಿಯಾಗಿ ಬೆಳೆಸಿದ್ದು ತಮ್ಮ ಕಾಲದಲ್ಲಿ.

ಶ್ರೀ ಕೆ. ಹೆಚ್. ರಂಗನಾಥ್.—ಎಲ್ಲರೂ ತೊಟ್ಟಿಲು ತೂಗುತ್ತಾರೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಖಾಸಗಿ ಸಂಸ್ಥೆಗಳು, ತಾಂತ್ರಿಕ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದು ಪಾಪ ಎಂದು ನಾನು ಹೇಳಲಿಲ್ಲ. ಇಲ್ಲಿ ಪ್ರೊವಿಸೋದಲ್ಲಿ ನಾವು ಹೇಳಿದ್ದೇವೆ.

"This Act permits any educational institution established before the date of the commencement of this Act"........

So, those institutions which were established before the commencement of this Act, which means that we are not going to welcome any new institution

ಮಾನ್ಯ ರಂಗನಾಥ್‌ರವರು ಸ್ವಲ್ಪ ಗಮನಿಸಬೇಕು. ಕಳೆದ 2–3 ವರ್ಷದಲ್ಲಿ ಇಷ್ಟು ತಾಂತ್ರಿಕ ಕಾಲೇಜುಗಳನ್ನು ಮಂಜೂರು ಮಾಡಿ, ಕ್ಯಾಪಿಟೇಷನ್ ಶುಲ್ಕವನ್ನು ವಸೂಲ್ಮಾಡಿ ನಡೆಸುವುದಕ್ಕೆ ಅವ ಕಾಶವನ್ನು ಮಾಡಿಕೊಟ್ಟವರು ಯಾರು ? ಹಿಂದೆ ನೀವು ಏನಾದಲೂ ಯೋಚನೆ ಮಾಡಿದ್ದೀರಾ ? ಯಾವ ಯಾವ ಜಾತಿಯವರು ಸಮ್ಮೇಳನಗಳನ್ನು ಮಾಡಿದರೋ ಆಯಾಯ ಜಾತಿಯವರಿಗೆ ಒಂದೊಂದು ಕಾಲೇಜುಗಳನ್ನು ಕೊಟ್ಟಿರಿ. ಈ ವರ್ಷ ಕೂಡ ಮಾನ್ಯ ಗುಂಡೂರಾಯರ ಸರ್ಕಾರವೇ ಏನಾದರೂ ಬಂದಿದ್ದಿದ್ದರೆ ಎಲ್ಲ ಜಾತಿಯವರಿಗೂ ಒಂದೊಂದು ಮೆಡಿಕಲ್ ಕಾಲೇಜನ್ನು, ಒಂದೊಂದು ಇಂಜಿನಿಯ ರಿಂಗ್ ಕಾಲೇಜನ್ನು ಮತ್ತು ಒಂದೊಂದು ಪಾಲಿಟೆಕ್ನಿಕ್‌ನ್ನು ಕೊಟ್ಟು ಬಿಡುತ್ತಿದ್ದರು.

ಶ್ರೀ. ಕೆ. ಹೆಚ್. ರಂಗನಾಥ್.—ಬೊಮ್ಮಾಯಿಯವರು ಕೊಡಬಾರದೆಂದು ಹೇಳಿದ್ದರೆ ?

ಶ್ರೀ. ಕೆ. ಜಿ. ಮಹೇಶ್ವರಪ್ಪ.—ಹೌದು, ನಾವು ಕೊಡಬಾರದೆಂದು ಹೇಳಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಈ ಸದನದಲ್ಲಿ ..., ತಾವು ಕಳೆದ ವರ್ಷದ ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿ. ಮಾನ್ಯ ಬೊಮ್ಮಾಯಿಯವರು ಏನು ಹೇಳಿದ್ದಾರೆಂಬುದು ಗೊತ್ತಾಗುತ್ತದೆ.

ಶ್ರೀ ಪಿ. ರಾಮದೇವ್.—ಆಗ ನಾನು ವಿರೋಧ ಮಾಡಿದ್ದೆ.

ಶ್ರೀ ಕೆ. ಹೆಚ್. ರಂಗನಾಥ್.—ಆಗ ನಿಮಗೆ ಮದುವೆ ಆಗಿರಲಿಲ್ಲ, ವಿರೋಧ ಮಾಡದೆ ಇನ್ನೇನು ಮಾಡುವುದಕ್ಕೆ ಸಾಧ್ಯವಿತ್ತು.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೆ, ಮದುವೆಗೂ ಈ ಕಾಲೇಜಿಗೂ ಏನು ಸಂಬಂಧ ? ಈ ರೀತಿ ಕಾಲೇಜುಗಳನ್ನು ಕೊಡಬಾರದೆಂದು ನಾವು ಅಪೋಸ್ ಮಾಡಿದ್ದೆವು.

ಒಬ್ಬ ಮಾನ್ಯ ಸದಸ್ಯರು.—ಅದು ಮಾನ್ಯ ದೇವೇಗೌಡರಿಗೆ ಗೊತ್ತಾಗಲಿಲ್ಲವೇ ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ದೇವೇಗೌಡರಿಗೆ ಅದು ಗೊತ್ತಾಗಲಿಲ್ಲವೆ ? ಕೆಂಪೇಗೌಡ ಮೆಡಿಕಲ್ ಕಾಲೇಜು ವಿಷಯ ಬಂದಾಗ ದೇವೇಗೌಡರಿಗೆ ಗೊತ್ತಾಗಲಿಲ್ಲವೆ ?

ಶ್ರೀ ಪಿ. ರಾಮದೇವ್.—ಆಗ ವಿದ್ಯಾರ್ಥಿಗಳು ಏನು ಹೇಳುತ್ತಿದ್ದರು ಗೊತ್ತೆ ? ಎಂ.ಎಲ್.ಎ. ಗಳಿಗೆ ಬೇಕಾದ್ದು ಒಂದೊಂದು ಮೆಡಿಕಲ್ ಕಾಲೇಜು, ಇಲ್ಲದಿದ್ದರೆ ಮಂತ್ರಿಗಿರಿ ಸಿಕ್ಕಿದರೆ ಸಾಕು ಎಂದು ಹೇಳಿಕೊಳ್ಳುತ್ತಿದ್ದರು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇಲ್ಲಿ ಮಾನ್ಯ ದೇವೇಗೌಡರ ಪ್ರಶ್ನೆ ಬರುವುದಿಲ್ಲ. ಹಿಂದಿನ ಸರ್ಕಾರದ ನೀತಿ ಏನಾಗಿತ್ತು ಎಂದರೆ, ಯಾವ ಜಾತಿಯವರೇ ಆಗಲಿ ಒಂದೊಂದು ಸಮ್ಮೇಳನವನ್ನು ಮಾಡಿ ನಮಗೆ ಒಂದೊಂದು ತಾಂತ್ರಿಕ ಕಾಲೇಜು ಬೇಕೆಂದು ಕೇಳಿದರೆ ಕೊಡುವುದಕ್ಕೆ ಪ್ರಾರಂಭ ಮಾಡಿದರು. ಇದರಿಂದಾಗಿ ಎಲ್ಲರೂ ಕೇಳುವುದು ಸ್ವಾಭಾವಿಕವಾಯಿತು. ಪ್ರತಿಯೊಂದು ಜಾತಿಯವರೂ ಕೇಳಲಿ ಬಿಡಿ. ಅವರು ಏನು ಕೇಳಿದ್ದರೂ ಅದರಲ್ಲಿ ಏನೂ ತಪ್ಪಿಲ್ಲ. ಏಕೆಂದರೆ ಮೆಡಿಕಲ್ ಕಾಲೇಜನ್ನೇ ಕೊಡುವಂಥ ಸರ್ಕಾರವಿದ್ದರೆ ಪ್ರತಿಯೊಬ್ಬರೂ ಕೇಳುತ್ತಾರೆ.

ಶ್ರೀ ಭೀಮಣ್ಣ ಖಂಡ್ರೆ.—ಆಗ ಒಂದು ಪ್ರಿನ್ಸಿಪಲ್ ಇತ್ತು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಆಗ ಪ್ರಿನ್ಸಿಪಲ್ ಏನೂ ಇರಲಿಲ್ಲ. ಆದ್ದರಿಂದಲೇ ನಾನು ಹೇಳುತ್ತಿರುವುದು. That is the rux of the matter. ಹಿಂದಿನ ಸರ್ಕಾರ ಜನರಿಗೆ ಏನು ಭಾವನೆಯನ್ನು ಹುಟ್ಟಿಸಿತ್ತು ಎಂದರೆ ಈ ಮೆಡಿಕಲ್ ಕಾಲೇಜನ್ನು ಕೊಡುವ ವಿಚಾರದಲ್ಲಿ, ಅಥವಾ ಇಂಜಿನಿಯರಿಂಗ್ ಕಾಲೇಜನ್ನು ಕೊಡುವ ವಿಚಾರದಲ್ಲಿ ಅಥವಾ ಪಾಲಿಟೆಕ್ನಿಕನ್ನು ಕೊಡುವ ವಿಚಾರದಲ್ಲಿ ಯೋಚನೆಯನ್ನೇ ಮಾಡಬೇಕಾಗಿಲ್ಲ. ಇದರಲ್ಲಿ ಯಾವುದೇ ಸ್ಟ್ಯಾಂಡರ್ಡ್‌ನ್ನೂ ಯೋಚನೆ ಮಾಡಬೇಕಾಗಿಲ್ಲ ಎನ್ನುವ ತತ್ವ ಇತ್ತು. ಮೆಡಿಕಲ್ ಕೌನ್ಸಿಲ್‌ನ ತತ್ವ ಆಗಲಿ, ಯೂನಿವರ್ಸಿಟಿ ಸ್ಟ್ಯಾಂಡರ್ಡ್ ಆಗಲಿ ಇರಬೇಕಾಗಿರಲಿಲ್ಲ. It is an Recard. ಪ್ರತಿಯೊಂದು ಜಾತಿಯವರಿಗೂ ಒಂದೊಂದು ಕಾಲೇಜನ್ನು ಕೊಟ್ಟರೆ ಏನು ತಪ್ಪು ? ಎಂದು ಹಿಂದಿನ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಹಿಂದೆ ಕೆಲವು ಜಾತಿಯವರು ತೆಗೆದುಕೊಂಡಿರುವುದು ಇಲ್ಲವೆ? ಹಾಗಾದರೆ ಈ ಜಾತಿಯವರಿಗೂ ಏತಕ್ಕೆ ಕೊಡಬಾರದು ? ಕ್ರಿಶ್ಚಿಯನ್ನರಿಗೆ ಏತಕ್ಕೆ ಕೊಡಬಾರದು ? ಮುಸಲ್ಮಾನರಿಗೆ ಏತಕ್ಕೆ ಕೊಡಬಾರದು ? ಕುರುಬರಿಗೆ ಏತಕ್ಕೆ ಕೊಡಬಾರದು ? ನಾಯಕ ಜಾತಿಯವರಿಗೆ ಏತಕ್ಕೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬಾರದು ? ಎಂದು ಕೇಳುವುದಕ್ಕೆ ಪ್ರಾರಂಭ ಮಾಡಿದರು. ಈ ರೀತಿ ಶುರುವಾದ ಮೇಲೆ ಪ್ರತಿಯೊಬ್ಬರೂ ಕೇಳುವುದಕ್ಕೆ ಪ್ರಾರಂಭ ಮಾಡಿದರು —

ಶ್ರೀ ಪಿ. ರಾಮದೇವ್.—ಶೃಂಗೇರಿಯಲ್ಲಿ ಕೊಡಲಿಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಆಗ ತಾವು ಹೆಚ್ಚಿಗೆ ಇಂಟರೆಸ್ಟ್ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಅದು ಆಗಲಿಲ್ಲ. ಇನ್ನು ನಮ್ಮ ಅಜೀಜ್ ಸೇಠ್‌ರವರಿಗೂ ಕೊಡಲಿಲ್ಲ. ಇಂಥ ಒಂದು ಪರಂಪರೆಯನ್ನು ಬೆಳೆಸಿದವರು ಯಾರು ? ಇಂಥ ಒಂದು ಅಪಾಯವನ್ನು ತಡೆಗಟ್ಟುವ ವ್ಯವಸ್ಥೆ, ಕಾನೂನು ಈ ಬಿಲ್‌ನಲ್ಲಿದೆ. ಇನ್ನು ಯಾವುದೇ ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನಾಗಲಿ, ಅಥವಾ ಮೆಡಿಕಲ್ ಕಾಲೇಜುಗಳನ್ನಾಗಲಿ ಕೊಡುವುದಿಲ್ಲ ಎನ್ನುವ ತತ್ವವನ್ನು ಈ ಸರ್ಕಾರ ಒಪ್ಪಿಕೊಂಡಿದೆ. ಇದನ್ನು ನೀವು ಸರಿ ಎಂದು ಹೇಳುತ್ತೀರೋ ಅಥವಾ ತಪ್ಪು ಎಂದು ಹೇಳುತ್ತೀರೋ ಗೊತ್ತಿಲ್ಲ. ಕೊಡುವುದಾದರೆ ಎಲ್ಲರಿಗೂ ಕೊಡಿ ಎಂದು ನಿಮ್ಮ ಧಾಟಿಯಲ್ಲಿ ಹೇಳಬಹುದು. ಏಕೆಂದರೆ ಇನ್ನೂ ಬಹಳ ಜನರು ಉಳಿದಿದ್ದಾರೆ. ಒಕ್ಕಲಿಗರಿಗೆ ಕೊಟ್ಟಿರಿ, ಹರಿಜನರಿಗೆ ಕೊಟ್ಟಿರಿ, ಇನ್ನು ಉಳಿದವರು ಏನು ಅನ್ಯಾಯ ಮಾಡಿದ್ದಾರೆ ? ಅವರಿಗೂ ಕೊಡಿ ಎಂದು ನೀವು ಹೇಳುವುದಾದರೆ ಹೇಳಬಹುದು. ನೀವು ಏನು ಈ ಕೂಸನ್ನು ಹಡೆದು ಬಿಟ್ಟಿದ್ದೀರಿ, ಇದನ್ನು ಇವತ್ತಿನ ದಿವಸ ನಾವು ಸಾಕಬೇಕಾಗಿದೆ ......

ಒಬ್ಬ ಮಾನ್ಯ ಸದಸ್ಯರು.—ಅಂದರೆ ನಿಮಗೆ ಮಕ್ಕಳಾಗುವುದಿಲ್ಲ ಎಂದು ಹೇಳಿದಂತಾಯಿತು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇದನ್ನು ಬಿಟ್ಟುಬಿಡಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅದನ್ನು ನಾವು ಬಿಡುವುದಕ್ಕೆ ತಯಾರಿಲ್ಲ. Whether it is legal or illeagel, whether it is legitimate or illegitimate child, it is the duty of the Government to protect it. We will adopt that child. We will protect that child. We will own the child. We will own your deserted child. The medical colleges and the engineering colleges are the deserted children and this Government will come to their rescue.

ಶ್ರೀ ಕೆ. ಹೆಚ್. ರಂಗನಾಥ್.—ಈಗ ನೀವು ಬಿಡುವಂತಿಲ್ಲ. ಸಾಕುತ್ತೀರಿ.

Sri GOVINDA P. VODEYARAJ.—That illegitimate child will take care of you and your Government

ಶ್ರೀ ಭೀಮಣ್ಣ ಖಂಡ್ರೆ.—ಅಂದರೆ ಅವರೂ ಇದರಲ್ಲಿ ಸೇರಿದ್ದಾರೆ ಎಂಬುದು ನಮ್ಮ ಮಾತು. ಶ್ರೀಮಾನ್ ದೇವೇಗೌಡರಾಗಲಿ, ಅಥವಾ ಬೇರೆಯವರಾಗಲಿ ತೆಗೆದುಕೊಂಡಿದ್ದಾರೆಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವು ಕೊಡುತ್ತಿದ್ದೀರಿ ನಾವು ತೆಗೆದು ಕೊಂಡಿದ್ದೇವೆಂದು, ನೀವು ಹೇಳುತ್ತಿರುವುದರಿಂದ. ಇದು ಇಲ್ಲಿಜಿಟಿಮೇಟ್ ಚೈಲ್ಡ್ ಎಂದು ನೀವು ಹೇಳುತ್ತಿದ್ದೀರಿ, ನಿಜ. ಆದರೆ ಈಗ ನೀವೂ ಅದನ್ನೇ ಮಾತನಾಡುತ್ತಿದ್ದೀರಲ್ಲಾ. ಅಂದ ಮೇಲೆ ಇದಕ್ಕೆ ನೀವೂ ಜವಾಬ್ದಾರರು. ಇಲ್ಲಿ ಯಾರೋ ಕೊಡುತ್ತಾರೆ, ಅದನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುವುದು ಅಲ್ಲ. ಯಾರೇ ಕೊಡಲಿ, ಅದು ಇಲ್ಲೀಗಲ್ ಎಂದು ತಿಳಿದು ಬಂದ ಮೇಲೆ ಅದನ್ನು ನೀವು ತೆಗೆದುಕೊಳ್ಳಬಾರದು. You are also responsible for that. As a Member of the Legislative Assembly you are also a part and parcel of that.

ಶ್ರೀ ಕೆ. ಜಿ. ಮಹೇಶ್ವರಪ್ಪ.—ನೀವೇ ಇದ್ದಿದ್ದರೆ ಬಹುಶಃ ಇನ್ನೂ ಎಷ್ಟು ಯೂನಿವರ್ಸಿಟಿಗಳನ್ನು ಕೊಡುತ್ತಿದ್ದಿರೋ ಏನೋ ಗೊತ್ತಿಲ್ಲ. ನಾವು ಯಾವುದೇ ಹೊಸ ಯೂನಿವರ್ಸಿಟಿಯನ್ನಾಗಲಿ, ತಾಂತ್ರಿಕ ಕಾಲೇಜನ್ನಾಗಲಿ, ಬಿ.ಎಡ್., ಕಾಲೇಜನ್ನು ಅಗಲಿ ಕೊಡುವುದಿಲ್ಲ ಎಂದು........

ಶ್ರೀ ಗೋವಿಂದ ಪಿ. ಒಡೆಯರಾಜ್.—ಈಗ ಶಿವಮೊಗ್ಗಾ ಯೂನಿವರ್ಸಿಟಿಗೆ ಹೊಸ ಇಂಜಿನಿಯರಿಂಗ್ ಕಾಲೇಜನ್ನು ಕೊಡುವುದಿಲ್ಲವೇ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ನಾವು ಕೊಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಕೊಡುವುದಿಲ್ಲವೇ ಇದು ಸರ್ಕಾರದ ತೀರ್ಮಾನವೆ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಹೌದು ಕೊಡಕೂಡದು. ಇದು ನನ್ನ ವಾದ. ಆದರೆ ಯಾವುದೇ ಯೂನಿವರ್ಸಿಟಿಯೂ ಇಲ್ಲದಿದ್ದರೆ ಅದು ಬೇರೆ ವಿಚಾರ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಯೂನಿವರ್ಸಿಟಿಗಳು ಹೆಚ್ಚಿಗೆ ಆದಷ್ಟೂ ದೇಶದ ಪ್ರಗತಿ ಆಗುವುದಿಲ್ಲ ....

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು, ಮಾನ್ಯ ಗೂಳಪ್ಪನವರನ್ನು ನೋಡಿದ ಕೂಡಲೇ ಅವರ ಪ್ಲೇಟನ್ನು ಬದಲಾವಣೆ ಮಾಡಿದರು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇವತ್ತು ಒಂದು ಮೂಲಭೂತ ತತ್ವ ಈ ಬಿಲ್‌ನಲ್ಲಿ ಅಡಗಿದೆ. ಸುಮಾರು ಮೂರನೇ ಒಂದು ಭಾಗ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಕೊಡುತ್ತೇವೆ. ಕೇವಲ ಸರ್ಕಾರವಾಗಲಿ ಅಥವಾ ಮಂತ್ರಿಗಳಾಗಲಿ ಬರೆದು ಕಳಿಸಿದರೆ ಕೊಡುವುದಿಲ್ಲ. ಈ ವರ್ಷ ಏನು ಆರ್ಡಿನೆನ್ಸ್ ಕೆಳಗೆ ಸೀಟುಗಳನ್ನು ಕೊಟ್ಟಿದೆ ಎಂಬುದನ್ನು ನೋಡಿದರೇ ತಮಗೇ ಗೊತ್ತಾಗುತ್ತದೆ. ಈ ಆರ್ಡಿನೆನ್ಸ್ ಬಂದ ಮೇಲೆ ಎಲ್ಲ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ನವರೂ ನಡುಗುತ್ತಿದ್ದಾರೆ. ನಾನೂ ಕೆಲವು ಪ್ರೈವೇಟ್ ಇನ್‌ಸ್ಟಿಟ್ಯೂಟ್ಸ್‌ನ್ನು ನೋಡಿದ್ದೇನೆ, ಮಾನ್ಯ ರಂಗನಾಥ್‌ರವರೂ ಕೂಡ ನೋಡಿದ್ದಾರೆ. ನಮಗೆ ಇದ್ದ ಸ್ವಾತಂತ್ರ್ಯವೆಲ್ಲಾ ಹೋಯಿತು. ನಾವು ಈ ಕಾಲೇಜುಗಳನ್ನು ಇನ್ನು ಏತಕ್ಕೆ ನಡೆಸಬೇಕು ಎಂದು ಖಾಸಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನವರು ಗೋಳಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೆ, ಹಿಂದೆ ರಾಜ್ಯಭಾರ ಮಾಡಿದವರು ಕಾಲೇಜುಗಳನ್ನು ಕೊಡದಿದ್ದರೂ ದಾವಣಗೆರೆ ಇನ್ನೂ ಮುಂತಾದ ಕಡೆಗಳಲ್ಲಿ ಕಾಲೇಜುಗಳನ್ನು ತೆರೆಯಲಿಲ್ಲವೆ ? ಹಿಂದುಳಿದ ಜನಾಂಗದವರು ಕೇಳಿದಾಗ ನಮ್ಮ ಸರ್ಕಾರದವರು ಕೊಟ್ಟಿದ್ದರಲ್ಲಿ ಏನು ತಪ್ಪಿದೆ ? ಆ ಕಾಲೇಜುಗಳನ್ನು ನಡೆಸುವುದಕ್ಕೆ ಈ ಸರ್ಕಾರದವರು ಏನು ಬೇಕಾದರೂ ಷರತ್ತುಗಳನ್ನು ಹಾಕಲಿ, ಕ್ಯಾಪಿಟೇಷನ್ ಫೀಸ್‌ನ್ನು ತಪ್ಪಿಸಲಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ಅವರು ಕಾಲೇಜನ್ನು ಕೊಟ್ಟಿದ್ದೇ ತಪ್ಪು ಎಂದು ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ಸ್ವಲ್ಪ ವಿವೇಚನೆಯಿಂದ ಮಾತನಾಡಬೇಕು. ಹಿಂದಿನ ಸರ್ಕಾರ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಟ್ಟು ಏನೋ ಮಹಾ ಅನ್ಯಾಯ ಮಾಡಿದ್ದಾರೆನ್ನುವ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಇದು ಸರಿಯಾದ್ದಲ್ಲ.

ಶ್ರೀ. ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಬೈರಪ್ಪಾಜಿಯವರು ಅನ್ಯಾಯ ಅಲ್ಲವೆಂದು ಹೇಳುತ್ತಿದ್ದಾರೆ...........

ಶ್ರೀ. ಬಿ. ಬೈರಪ್ಪಾಜಿ.—ಅದರಲ್ಲಿ ಏನೂ ಅನ್ಯಾಯವಾಗಿಲ್ಲ. ಕಾಲೇಜುಗಳನ್ನು ಕೊಟ್ಟಿದ್ದೇವೆ. ಅಲ್ಲಿ ಹುಡುಗರು ಓದುತ್ತಿದ್ದಾರೆ. ನಮ್ಮ ಹಳ್ಳಿಯ ಹುಡುಗರು ಓದಬಾರದೇನು ?

ಶ್ರೀ ಪಿ. ರಾಮದೇವ್.—ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ನಿಮ್ಮ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರೇ ಒಂದು ಕಾಗದವನ್ನು ಬರೆದಿರುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಬರೆದಿದ್ದಾರೆ, ಎಲ್ಲಿ ಅನ್ಯಾಯ ನಡೆಯುತ್ತಿದೆ ಅದನ್ನು ತಪ್ಪಿಸಲು, ಎಲ್ಲಿ ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುತ್ತಿದ್ದಾರೆ ಅದನ್ನು ತಪ್ಪಿಸಲು ಕಾಗದ ಬರೆದಿರುತ್ತಾರೆ. ಅದನ್ನು ಬಿಟ್ಟು ಹುಡುಗರೇ ಓದಬಾರದು ಎನ್ನುವ ಮಟ್ಟಕ್ಕೆ ಹೋದರೆ ಬಹಳ ವ್ಯಸನವಾಗುತ್ತದೆ. ನಮಗೂ ಕೂಡ ಬಹಳ ನೋವಾಗುತ್ತದೆ.

ಶ್ರೀ ಪಿ. ರಾಮದೇವ್.—ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಕೇಂದ್ರದಿಂದ ಸರಕ್ಯುಲರ್ ಬಂದಿರುತ್ತದೆ, ಹಿಂದಿನ ಸರ್ಕಾರಕ್ಕೂ ಬಂದಿರುತ್ತದೆ, ಈಗಿನ ಸರ್ಕಾರಕ್ಕೂ ಬಂದಿದೆ. ಯಾರನ್ನು ಹಾಕಬೇಕು ಎಂದು ನಿಮ್ಮ ಪ್ರಧಾನ ಮಂತ್ರಿಯವರು ಹೇಳಿದ್ದನ್ನು ಬೆಂಬಲಿಸುತ್ತೀರೋ ಅಥವಾ ತಪ್ಪು ಎಂದು ಹೇಳುತ್ತೀರೋ ? ಅವರು ಹೇಳಿದ್ದನ್ನು ತಪ್ಪು ಎಂದು ಹೇಳಿ, ತಾವು ಅದು ಮಾಡುವುದಿಲ್ಲ, ಇದು ಮಾಡುವುದಿಲ್ಲ. ಮಾನ್ಯ ಬೈರಪ್ಪಾಜಿಯವರಿಗೆ ಕೃತಜ್ಞನಾಗಿದ್ದೇನೆ. ಏತಕ್ಕೆಂದರೆ,

(ಗೊಂದಲ)

ಶ್ರೀ ಬಿ. ಬೈರಪ್ಪಾಜಿ.—ಜಾತಿ ಆಧಾರದ ಮೇಲೆ...........ಹಿಂದಿನ ಸರ್ಕಾರ ....

ಶ್ರೀ ಆರ್. ಎಲ್. ಜಾಲಪ್ಪ.—ಅವರು ಕಾಲೇಜ್ ಕೊಟ್ಟಿದ್ದು ತಪ್ಪು ಎಂದು ಹೇಳಲಿಲ್ಲ. ಕಾಲೇಜುಗಳನ್ನು ಕೊಟ್ಟಿದ್ದಾರೆ, ಕೇಂದ್ರದಲ್ಲೂ ಕೊಟ್ಟಿದ್ದಾರೆ.

(ಗೊಂದಲ)

ಸ್ವಾಮಿ ಅವರು ಮಾನ್ಯ ಸದಸ್ಯರು ಕುಳಿತುಕೊಳ್ಳಲುಹೇಳಿ, ಅವರು ಹೀಗೆ ಕೂಗಾಡುತ್ತಿದ್ದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಬೈರಪ್ಪಾಜಿಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ಸ್ವಲ್ಪ ಹೇಳಲಿ.

(ಗೊಂದಲ)

ಶ್ರೀ ಬಿ. ಬೈರಪ್ಪಾಜಿ.—ಕಾಲೇಜುಗಳನ್ನು ಕೇಳಿದವರಿಗೆಲ್ಲ ಕೊಟ್ಟಿದ್ದಾರೆ. ಜಾತಿ ಆಧಾರದ ಮೇಲೆ ಕೊಟ್ಟಿದ್ದಾರೆ. ಮಾನ್ಯ ರಂಗನಾಥರವರಿಗೂ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಕಾಲೇಜುಗಳನ್ನು ಕೊಟ್ಟಿದ್ದೆ ತಪ್ಪು ಎಂದು ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೈರಪ್ಪಾಜಿಯವರೇ ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ಕಾಲೇಜುಗಳನ್ನು ಕೊಟ್ಟಿದ್ದೆ ತಪ್ಪು ಎಂದು ಯಾರೂ ಹೇಳಲಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಸಹಕಾರಮಂತ್ರಿಗಳು _ (ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಕಾಲೇಜುಗಳನ್ನು ಕೊಟ್ಟಿದ್ದು ತಪ್ಪು ಎಂದು ಯಾರು ಹೇಳಲಿಲ್ಲ. ಕೇಳಿದವರಿಗೆಲ್ಲ ಕೊಟ್ಟಿರುತ್ತಾರೆಂದು ಹೇಳಿದೆವು. ಮತ್ತೆ ಹಳ್ಳಿಯ ಹುಡುಗರು ಓದಬಾರದೂ ಎಂದೂ ಕೂಡ ನಾವು ಹೇಳಲಿಲ್ಲ. ಅವರೇ ಹೇಳಲಿ ಹಳ್ಳಿಯ ಹುಡುಗರಿಗೆ ಎಲ್ಲಿ ಕೊಟ್ಟಿರುತ್ತಾರೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಈ ಸಭೆಯಲ್ಲಿ ನಡೆದಂಥ ಭಾಷಣವನ್ನು ನಾನು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡುತ್ತಿದ್ದೆ. ಮಾನ್ಯ ಮಹೇಶ್ವರಪ್ಪನವರು ಪ್ರಾರಂಭ ಮಾಡಿದರು. ಜಾತಿಯ ವಿಚಾರವನ್ನು ತೆಗೆದುಕೊಂಡು ಕಾಲೇಜುಗಳನ್ನು ಕೊಟ್ಟಿರುತ್ತಾರೆಂದು ಹೇಳಿದರು. ಸಹಜವಾಗಿ ನಮ್ಮವರಾದ ಶ್ರೀಮಾನ್ ಬೈರಪ್ಪಾಜಿಯವರು ಒಂದು ವಿಚಾರ ಮಾಡಿ ಹಿಂದೆಯೂ ಕೂಡ ಜಾತೀಯತೆ ನಡೆಯುತ್ತಿತ್ತು. ಈಗಲೂ ಕೂಡ ಜಾತೀಯತೆ ನಡೆಯುತ್ತಿದೆ ಎಂದು ಹೇಳಿದರು. ಅದನ್ನು ಅಷ್ಟಕ್ಕೆ ಬಿಟ್ಟಿದ್ದರೆ ಅಲ್ಲಿಗೆ ಹೋಗುತ್ತಿತ್ತು. ಸನ್ಮಾನ್ಯ ಸಚಿವರು, ಸಹಕಾರ ಮಂತ್ರಿಗಳು ತಿಳಿದು ಮಾತನಾಡಿದರೋ ಅಥವಾ ತಿಳಿಯದೇ ಮಾತನಾಡಿದರೋ ನನಗೆ ಗೊತ್ತಿಲ್ಲ. ಅದರ ಪರಿಣಾಮವಾಗಿ ಏನಾಗಿದೆ ಎಂದರೆ ಎಷ್ಟು ಜನರನ್ನು ತೆಗೆದುಕೊಂಡಿರುತ್ತೀರಿ. ನಿಮ್ಮ ಜಾತಿಯವರನ್ನೇ ತೆಗೆದುಕೊಂಡಿರುತ್ತೀರಿ ಎಂದು ಹೇಳಿದರೆ, ಕೆಂಪೇಗೌಡ ಕಾಲೇಜಿಗೆ ಎನ್ನುವ ಅಭಿಪ್ರಾಯ ಬಂದಿದೆ. ಜಾತಿ ಪ್ರಶ್ನೆಯನ್ನು ಎತ್ತಿ ಇಡೀ ಸದನದ ಕಾರ್ಯ ಕಲಾಪಗಳಿಗೆ ಅಡ್ಡಿಯಾಗಿದೆ. It was raised by Sri Maheshwarappa. Then he had to give a reply. He gave a reply in response to it.

ಅವರು ಅದಕ್ಕೆ ಸಮರ್ಪಕವಾಗಿ ಕೊಟ್ಟಿದ್ದರೆ ಎಷ್ಟು ಹಳ್ಳಿ ಹುಡುಗರಿಗೆ ಕೊಟ್ಟಿದ್ದೀರಿ, ನಿಮ್ಮ

ಜಾತಿಯ ಹುಡುಗರಿಗೇ ಕೊಟ್ಟಿದ್ದೀರಿ ಎಂದು ಹೇಳಿದ್ದು ಸರಿಯಾದ ಮಾತಲ್ಲ. ಇಂಥ ಒಂದು ವಿಚಾರಣೆ ಯನ್ನು ಸದನದ ಕಾರ್ಯಕಲಾಪಗಳಲ್ಲಿ ಕೇಳತಕ್ಕಂಥದನ್ನು ದಯವಿಟ್ಟು ನಿಲ್ಲಿಸಬೇಕು. ಜಾತಿ ಜಾತಿ ವೈಷಮ್ಯವನ್ನು ತೋರಿಸತಕ್ಕಂಥ ಕೆಲಸ ಈ ಸದನದಲ್ಲಿ ಆಗಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಜಾತಿ ವಿಚಾರವನ್ನು ನಾನು ಎತ್ತಿದ್ದರೆ ಅದನ್ನು ತೆಗೆಸಿಬಿಡಿ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸ್ನೇಹಿತರು ಸಹಕಾರಿ ಸಚಿವರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರೀತಿ ಭಾಷಣ ಮಾಡತಕ್ಕಂಥದ್ದು, ಪ್ರಚೋದನೆ ಮಾಡತಕ್ಕಂಥ ಒಳ್ಳೆಯ ಸಂಪ್ರದಾಯವಲ್ಲ. ಮಾನ್ಯ ಮುಖ್ಯಮಂತ್ರಿ ಗುಂಡೂರಾಯರಾಗಿದ್ದಾಗ ಅವರು ಕಾಲೇಜುಗಳನ್ನು ಕೊಟ್ಟದ್ದು, ಅವರ ಔದಾರ್ಯವನ್ನು ತೋರಿಸುತ್ತದೆ. ಕಾಲೇಜುಗಳನ್ನು ಕೊಟ್ಟರು, ಕೊಟ್ಟದ್ದು ತಪ್ಪು ಎಂದು ಹೇಳ ತಕ್ಕಂಥ ಧಾಟಿಯಲ್ಲಿ, ಹೇಳತಕ್ಕಂಥ ರೀತಿ ನೀತಿಗಳನ್ನು ಬಿಟ್ಟುಬಿಡಬೇಕೆಂದು ತಮ್ಮ ಮೂಲಕ ಮಾನ್ಯ ಸ್ನೇಹಿತರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರು ಜಾತಿಯ ಬಗ್ಗೆ ಹೇಳಿದರು ಎಂದು ಹೇಳಿದ್ದಾರೆ. ದಯವಿಟ್ಟು ಅದನ್ನು ತೆಗೆಸಿಬಿಡಿ. ಅಲ್ಲಿ ಏನು ಇದೆ, ಏನಾದರೂ ಜಾತಿ ಆ ರೀತಿ ಮಾತನಾಡಿದ್ದರೆ ನಾನೇನಾದರೂ ಆ ರೀತಿ ಜಾತಿ ಎಂದು ಹೇಳಿದ್ದರೆ ಅದನ್ನು ನೋಡಿಸಿ.

ಅಧ್ಯಕ್ಷರು.—ನೋಡಿಸುತ್ತೇನೆ. ತಾವು ಹೇಳಿದ್ದರೆ ಅದನ್ನು ನೋಡಿ ತೆಗೆಸುತ್ತೇನೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಜಾತಿ ಆಧಾರದ ಮೇಲೆ ಕಾಲೇಜುಗಳನ್ನು ಕೊಟ್ಟಿದ್ದಾರೆ ಅದು ತಪ್ಪು ಕೊಟ್ಟಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಹಿಂದುಳಿದ ಜನ ಕಾಲೇಜು ಪ್ರಾರಂಭಮಾಡಬೇಕು, ಬಡವರಿಗೆ ಅನು ಕೂಲ ಮಾಡಿಕೊಡಬೇಕು ಎಂದು, ಹಳ್ಳಿಗಾಡು ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಕಾಲೇಜುಗಳನ್ನು ಕೊಡಿ ಎಂದು ಕೇಳಿದ್ದಾರೆ. ಅವರು ಕೊಟ್ಟಿದ್ದಾರೆ. ಇದು ಜಾತಿ ಆಧಾರದ ಮೇಲೆ ಕೊಟ್ಟಿದ್ದಲ್ಲ. ಇದು ತಪ್ಪೆ.

ಅಧ್ಯಕ್ಷರು.— ತಪ್ಪಿದ್ದರೆ ಅದನ್ನು ವಿಮರ್ಶೆ ಮಾಡೋಣ. ಮುಂದಕ್ಕೆ ಅವರು ಹೋಗಲಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಯಾವ ಹಳ್ಳಿ ಮಕ್ಕಳಿಗೆ ಕೊಟ್ಟಿದ್ದಾರೆ ಅವರೇ ಹೇಳಲಿ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಬೈರಪ್ಪಾಜಿಯವರು ಖಾಸಗಿ ಸಂಸ್ಥೆಗಳಿಗೆ ತಾಂತ್ರಿಕ ಕಾಲೇಜುಗಳನ್ನು ನಡಸುವುದಕ್ಕೆ ಅನುಮತಿ ಕೊಟ್ಟಿರುವುದು ತಪ್ಪಲ್ಲವೆಂದು ಖಚಿತವಾಗಿ ಹೇಳಿದ್ದಾರೆ. ಖಾಸಗಿ ಸಂಸ್ಥೆಗಳವರು ನಡೆಸತಕ್ಕಂಥ ತಾಂತ್ರಿಕ ಕಾಲೇಜುಗಳನ್ನು ಅವರು ಸರಿಯಾದ ನಿಯಂತ್ರಣ ಮಾಡಿ ನಡೆಸಲಿ ಎನ್ನುವ ಸಲಹೆಗಳನ್ನು ಹೇಳಿದ್ದಾರೆ. ಅದನ್ನು ಈ ಬಿಲ್ಲಿನಲ್ಲಿ ಹೇಳಿರುತ್ತಾರೆ. ಖಾಸಗಿ ಇನ್‌ಸ್ಟಿಟ್ಯೂಷನ್‌ಗಳನ್ನು ಜಾತಿ ಆಧಾರದ ಮೇಲೆ ಕೊಟ್ಟಿರುತ್ತಾರೋ ಅಥವಾ ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ಅದು ಅವರವರಿಗೆ ಬಿಟ್ಟಿದ್ದು. ಈಗ ಅವರ ಮೇಲೆ ಹಿಡಿತ ಇಟ್ಟುಕೊಳ್ಳಬೇಕೆಂದು ಈ ಬಿಲ್ಲನ್ನು ಮಂಡಿಸಲಾಗಿದೆ. ಅದರಲ್ಲಿ ಏನು ತಪ್ಪುಮಾಡಿರುತ್ತಾರೆಂದು ಹೇಳುತ್ತೀರಿ ?

ಅಧ್ಯಕ್ಷರು—ತಾವು ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ.

ಶ್ರೀ ಕೆ. ಜಿ. ಮಹೇಶ್ವರಪ್ಪ,—ನನಗೆ ಇನ್ನೂ ಕಾಲುಗಂಟೆ ಬೇಕಾಗುತ್ತದೆ.

ಅಧ್ಯಕ್ಷರು.—ಈಗಾಗಲೇ 5 ಗಂಟೆಯಾಗುತ್ತಿರುತ್ತದೆ.

ಶ್ರೀ ಕೆ. ಜಿ, ಮಹೇಶ್ವರಪ್ಪ.—ನಾಳೆ ಮುಂದುವರಿಸುತ್ತೇನೆ.

ಅಧ್ಯಕ್ಷರು.-ಇಂದಿನ ಸಭೆಯ ಕಾರ್ಯಕಲಾಪಗಳನ್ನು ನಾಳೆ 11-00 ಗಂಟೆಗೆ ಮುಂದೂಡಲಾಗಿದೆ. ನಾಳೆ ಹನ್ನೊಂದು ಗಂಟೆಗೆ ಪುನಃ ಸಭೆ ಸೇರುತ್ತದೆ.

ಸದನವು ಐದು ಗಂಟೆಗೆ ಮುಕ್ತಾಯವಾಗಿ ಶುಕ್ರವಾರ ಪುನಃ ದಿನಾಂಕ 12ನೇ ಆಗಸ್ಟ್ 1983 ರಂದು ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಿತು,

ANNEXURE (i)

THE KARNATAKA KHADI AND VILLAGE INDUSTRIES (AMENDMENT) BILL, 1983.

(L. A. Bill No. 26 of 1983)

A Bill further to amend the Karnataka Khadi and Village Industries Act, 1956.

Where as it is expedient further to amend the Karnataka